ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2021

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444
ಸಂಪುಟ-21 ಸಂಚಿಕೆ-4 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ : ಶ್ರೀ ಶಾರದಾ ದೇವಿಯ ಪ್ರತಿಷ್ಠಾಪನಾ ದಿನಾಚರಣೆ

## ವೃತ್ತಿಪರ ಕಲಿಕೆಯ ದೃಷ್ಟಿಕೋನ ಬದಲಾಗಬೇಕು : ಡಾ। ರವಿರಾಜ್, ಉಡುಪಿ





ತಾ.14.03.2021ರಂದು ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವ ನೆರವೇರಿತು. ಬೆಳಿಗ್ಗೆ 7ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಭಜನೆ, ಪಠಣೆ, ಪಾರಾಯಣ ಇತ್ಯಾದಿಗಳು ಸಾಂಗವಾಗಿ ನಡೆದು ಮಧ್ಯಾಹ್ನ 12ರ ಸುಮಾರಿಗೆ ಮಹಾಪೂಜೆ ನೆರವೇರಿತು. ನಂತರ ಶ್ರೀಶಾರದಾ ಮಂಟಪದಲ್ಲಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಪ್ರಯುಕ್ತ ಸಭಾಕಾರ್ಯಕ್ರಮ ಏರ್ಪಡಿಸಲಾಗಿತು. ಈ ಸಮಾರಂಭದ ಮುಖ್ಯ ಅತಿಥಿಯಾಗಿ ಬೈಂದೂರಿನ ಖ್ಯಾತ ಶಿಶು ತಜ್ಞ ಡಾ। ರವಿರಾಜ್ ಆಗಮಿಸಿದ್ದರು. ಕೇವಲ ವೈದ್ಯಕೀಯ, ಇಂಜಿನಿಯರಿಂಗ್ ಪದವಿ ಓದಿದಾಗ ಮಾತ್ರ ಜೀವನ ಸಾರ್ಥಕ ಎಂಬ ಪರಿಕಲ್ಪನೆ ಇಂದಿನ ನಮ್ಮ ಸಮಾಜದಲ್ಲಿದೆ. ಈ ದೃಷ್ಟಿಕೋನದಿಂದ ಹೊರಬಂದು ಯು.ಪಿ.ಎಸ್.ಸಿ, ಐ.ಪಿ.ಎಸ್, ಐ.ಎ.ಎಸ್ ಶ್ರೇಣಿಗಳ ಪರೀಕ್ಷೆ ಬರೆದು ತೇರ್ಗಡೆಯಾದಾಗ ಅದಕ್ಕಿಂತಲೂ ಹೆಚ್ಚಿನ ಸಾಧನೆ ಸಾಧ್ಯ ಎಂಬ ವಿಚಾರವನ್ನು ನಮ್ಮ ಇಂದಿನ ವಿದ್ಯಾರ್ಥಿಗಳು ಮನಗಾಣಬೇಕು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಇದರ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ನಿರ್ವಹಿಸಿ, ಎಲ್ಲರನ್ನು ಸ್ವಾಗತಿಸುತ್ತಾ ಪ್ರಾಸ್ತಾವಿಕ ಮಾತುಗಳನ್ನಾಡಿ ಕೋವಿಡ್19ರ ಕಾರಣದಿಂದ ಈ ವರ್ಷದ ಪ್ರತಿಭಾ ಪುರಸ್ಕಾರ ನೀಡಲಾಗಲಿಲ್ಲ. ಅಲ್ಲದೆ ಶಾರದಾ ಮಂಟಪದ ಭೋಜನ ಗೃಹದ ನವೀಕರಣ ಕಾರ್ಯ ಮುಗಿದಿದ್ದು ರೂ.30 ಸಾವಿರಕ್ಕಿಂತಲೂ ಹೆಚ್ಚು ದೇಣಿಗೆ ನೀಡಿದ ದಾನಿಗಳಿಗೆ ಕೃತಜ್ಞತಾರ್ಪಣೆಯೊಂದಿಗೆ ಪ್ರಮಾಣ ಪತ್ರವನ್ನೂ ವಿತರಿಸಬೇಕಾಗಿದೆ. ಅದಕ್ಕಾಗಿ ಈ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದರು.

**ಉದಯಚಂದ್ರ ಪ್ರತಿಭಾ ಪುರಸ್ಕಾರ :** ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ(ರಿ) ಇದರ ಕೈಕೆಳಗೆ ಹಿಂದೆ ಯುವವಿಭಾಗದ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಆಕಸ್ಮಿಕವಾಗಿ ನಿಧನರಾಗಿದ್ದ ದಿ। ಕೊಕ್ರಾಡಿ ಉದಯಚಂದ್ರರ ಸ್ಮರಣಾರ್ಥ ನೀಡುವ "ಉದಯಚಂದ್ರ ಪ್ರತಿಭಾ ಪುರಸ್ಕಾರ"ವನ್ನು 2019-20ರ ಸಾಲಿನ ವಾರ್ಷಿಕ ಪರೀಕ್ಷೆಯ ಅಂಕಗಳ ಆಧಾರದಲ್ಲಿ ಈ ಕೆಳಗಿನಂತೆ ವಿತರಿಸಲಾಯಿತು. 1) ಶ್ರೀ ಜಯಚಂದ್ರ ಬಿ.ವಿ ಹಾಗೂ ಶ್ರೀಮತಿ ಸ್ವಪ್ನಾ ಜೆ. ಕೊಡಿಯಾಲ್‌ಬೈಲ್ ಮಂಗಳೂರು ಇವರ ಪುತ್ರಿ ಮಂಗಳೂರು ಕೆನರಾ ಹೈಸ್ಕೂಲ್ ವಿದ್ಯಾರ್ಥಿನಿ ಕುಮಾರಿ ನಿಧಿ ರಾವ್ 624/625 ಅಂಕ ಪಡೆದು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ ಇರುವ ಉದಯಚಂದ್ರ ಪ್ರತಿಭಾ ಪುರಸ್ಕಾರವನ್ನು ಪಡೆದರು. 2) ಶ್ರೀ ಶ್ರೀನಿವಾಸ ಹೆಬ್ಬಾರ್ ಹಾಗೂ ಶ್ರೀಮತಿ ಪೂರ್ಣಿಮಾ, ಪೆಳ್ಳಿ ಕ್ರಾಸ್, ಬೈಲೂರು, ಕಾರ್ಕಳ ತಾಲೂಕು ಇವರ ಪುತ್ರಿ ಕಾರ್ಕಳದ ಜ್ಞಾನಸುಧಾ ಪಿ.ಯು ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಪ್ರಜ್ಞಾ ಹೆಬ್ಬಾರ್ 573/600 ಅಂಕ ಪಡೆದು ಪಿ.ಯು.ಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗಾಗಿ ಇರುವ ಉದಯಚಂದ್ರ ಪ್ರತಿಭಾ ಪುರಸ್ಕಾರವನ್ನು ಸ್ವೀಕರಿಸಿದರು. 3) ಶ್ರೀ ರವೀಂದ್ರ ಭಂಡಿ ಹಾಗೂ ಶ್ರೀಮತಿ ವಾಣಿ ಭಂಡಿ ರಥಬೀದಿ, ಪೆರ್ಡೂರು ಇವರ

(5ನೇ ಪುಟಕ್ಕೆ...)

## ನಂದಳಿಕೆ ತಂಡಕ್ಕೆ ಶ್ರೀ ಶಾರದಾ ಟ್ರೋಫಿ-2021



ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ವತಿಯಿಂದ ನಡೆಯುವ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವು 21.03.2021ರ ರವಿವಾರ ಉಡುಪಿಯ ಎಂ.ಜಿ.ಎಂ ಕ್ರೀಡಾಂಗಣದಲ್ಲಿ ನಡೆಯಿತು. ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಸೀನಿಯರ್ ಮೆನೇಜರ್ ಶ್ರೀ ರವೀಂದ್ರ ಭಂಡಿ ಪೆರ್ಡೂರುರವರು ಪ್ರಥಮ ಪಂದ್ಯಕ್ಕೆ ನಾಣ್ಯ ಚಿಮ್ಮಿಸುವ ಮೂಲಕ ಉದ್ಘಾಟಿಸಿದರು. ಮೊದಲು ಶ್ರೀ ರವೀಂದ್ರ ಭಂಡಿಯವರು ಸಂಘದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್, ಮಾಜಿ ಅಧ್ಯಕ್ಷರುಗಳಾದ ಶ್ರೀ ಸಿ.ಎಸ್.ರಾವ್ ಹಾಗೂ ಶ್ರೀ ವೈ.ಭುವನೇಂದ್ರ ರಾವ್ ಜೊತೆಯಾಗಿ ಆಗಮಿಸಿರುವ ಎಲ್ಲ ತಂಡಗಳ ಪರಿಚಯ ಮಾಡಿಕೊಂಡರು. ಕರ್ನಾಟಕ ರಾಜ್ಯ ಮಟ್ಟದ ಈ ಪಂದ್ಯಾಟಕ್ಕಾಗಿ ಬೆಂಗಳೂರು (ಎರಡು ತಂಡ), ಬೆಳ್ತಂಗಡಿ (ಎರಡು ತಂಡ) ಪಡುಬಿದ್ರಿ, ಉಡುಪಿ, ಮಂದಾರ್ತಿ, ನಂದಳಿಕೆ (ಎರಡು ತಂಡ) ಸುರತ್ಕಲ್ (ಎರಡು ತಂಡ) ಕಬ್ಬಿನಾಲೆ, ಬಂಟ್ವಾಳ, ಹಿರಿಯಡ್ಕ, ಬಾರ್ಕೂರು, ಕಟಪಾಡಿ, ಕುಂದಾಪುರ ಸಹಿತ ಒಟ್ಟು 17 ತಂಡಗಳು ಭಾಗವಹಿಸಿದ್ದವು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀ ರವೀಂದ್ರ ಭಂಡಿಯವರು ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಮಾಜಿ ಅಧ್ಯಕ್ಷರುಗಳಾದ ಶ್ರೀ ಸಿ.ಎಸ್.ರಾವ್ ಹಾಗೂ ಶ್ರೀ ವೈ. ಭುವನೇಂದ್ರ ರಾವ್, ಕೋಶಾಧಿಕಾರಿ ಶ್ರೀ ಜಯರಾಮ್ ರಾವ್, ಕಾರ್ಕಳ ಶಂಕರ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಕರ್ವಾಲು ಹರಿಶ್ಚಂದ್ರ ರಾವ್ ಮೊದಲಾದವರು ಉಪಸ್ಥಿತರಿದ್ದು ವಿಜೇತರಿಗೆ ಬಹುಮಾನ ವಿತರಿಸಿದರು. ಸಂಘದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್ ಸ್ವಾಗತಿಸಿದರು. ನಿರ್ದೇಶಕ ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ

(5ನೇ ಪುಟಕ್ಕೆ...)

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-2.




ಪ್ರಿಯರೇ,

ಸ್ವಸ್ತಿ ಶ್ರೀ ಪ್ಲವ ನಾಮ ಸಂ।ರದ
ಚೈತ್ರ ಶುಕ್ಲ 1ಯು ತಾ.13-04-2021ನೇ ಮಂಗಳವಾರದಿಂದ
ಚೈತ್ರ ಶುಕ್ಲ 9ಯು ತಾ.21-04-2021ನೇ ಬುಧವಾರ ರಾಮನವಮಿಯ ತನಕ

### ಕಿರುನವರಾತ್ರಿ ಉತ್ಸವವು

ಶ್ರೀ ಶಾರದಾ ದೇವಸ್ಥಾನದಲ್ಲಿ ಜರಗಲಿರುವುದು.
ಈ ಪ್ರಯುಕ್ತ ಪ್ರತಿದಿನ ಸಂಜೆ ದೇವಿಗೆ ವಿಶೇಷ ಪೂಜೆ ನೆರವೇರಲಿದೆ.



ಶ್ರೀ ಶಾರದಾ ದೇವಸ್ಥಾನದಲ್ಲಿ

### ಶ್ರೀ ಶಂಕರ ಜಯಂತಿ ಆಚರಣೆಯು

ತಾ.17-05-2021ನೇ ಸೋಮವಾರ ನೆರವೇರಲಿದೆ.

**ಕಾರ್ಯಕ್ರಮಗಳ ವಿವರ :** ಬೆಳಿಗ್ಗೆ 8-00 ಗಂಟೆಗೆ ಪ್ರಾರ್ಥನೆ, ರುದ್ರಾಭಿಷೇಕ, ಪಾರಾಯಣ, ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ, ಬೆಳಿಗ್ಗೆ 11 ಗಂಟೆಗೆ ಉಪನ್ಯಾಸ ಕಾರ್ಯಕ್ರಮ ಮತ್ತು ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ.


### ಸಾಮೂಹಿಕ ಉಪನಯನ

ಈ ವರ್ಷ **ಸಾಮೂಹಿಕ ಉಪನಯನ**ವು ಅಕ್ಷಯ ತದಿಗೆಯ ಶುಭ ದಿನವಾದ ತಾ.14-05-2021ರ ಶುಕ್ರವಾರದಂದು ನಡೆಯಲಿದ್ದು ತಮ್ಮ ವಟುಗಳಿಗೆ ಉಪನಯನ ಸಂಸ್ಕಾರ ನಡೆಸುವವರೇ ನೋಂದಾಯಿಸಲು ತಾ.10-05-2021 ಕೊನೆಯ ದಿನವಾಗಿರುತ್ತದೆ. ಆಸಕ್ತರು ಸಂಘದ ಕಛೇರಿಯನ್ನು 0820-2958444ನಲ್ಲಿ ಸಂಪರ್ಕಿಸಬೇಕಾಗಿ ಕೋರುತ್ತೇವೆ.

-ಆಡಳಿತ ಮಂಡಳಿ

# ಭಗವಾನ್ ಶ್ರೀ ಶಂಕರಾಚಾರ್ಯರು

ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.



ಕಾಲನ ಕಾಲಡಿ ಭಾರತ ಅನೇಕ ಶತಮಾನಗಳಲ್ಲಿ ನಾನಾವಿಧವಾದ ಕಷ್ಟಸಂಕಷ್ಟಗಳನ್ನೆದುರಿಸಿ ತನ್ನ ಮೊದಲಿನ ತತ್ವಗಳನ್ನು ಅಳವಡಿಸಿಕೊಳ್ಳಲು ಅನೇಕ ಮಹಾಪುರುಷರ ಹುಟ್ಟು ಅಗತ್ಯವಾಯಿತು. ಕೇರಳದ 'ಕಾಲಡಿ'ಯಲ್ಲಿ ಸುಮಾರು 1200 ವರ್ಷಗಳ ಹಿಂದೆ ಶ್ರೀ ಭಗವತ್ಪಾದ ಶಂಕರಾಚಾರ್ಯರು ಹಿಂದೂ ದೇಶದ ಇತಿಹಾಸ ದಿಗಂತದಲ್ಲಿ ಬಾಲಭಾಸ್ಕರನಂತೆ ಉದಯಿಸಿದರು.


ಕಾಲಡಿಯ ಅಗ್ರಹಾರದಲ್ಲಿ ನಂಬೂದರಿ ಬ್ರಾಹ್ಮಣ ವರ್ಗದ ಶಿವಗುರು ಮತ್ತು ಆರ್ಯಾಂಬೆ ಎಂಬ ದಂಪತಿಗಳಿದ್ದರು. ದಂಪತಿಗಳು ಶುಚಿರ್ಭೂತರು ಹಾಗೂ ನಿಷ್ಠಾವಂತರೂ ಆಗಿದ್ದರು. ಅವರಿಗೆ ಬಹಳ ಸಮಯದಿಂದ ವಂಶೋದ್ಧಾರಕನಾದ ಪುತ್ರ ಸಂತಾನ ಇರಲಿಲ್ಲ. ಆದ್ದರಿಂದ ದಂಪತಿಗಳು ಅನೇಕ ವ್ರತ ಪೂಜಾದಿಗಳನ್ನು ಕೈಗೊಂಡರು. ಇವರ ನಿಷ್ಠೆಗೆ ಸಂತುಷ್ಟನಾದ ಈಶ್ವರನು ಪ್ರಸನ್ನನಾಗಿ ಕಾಣಿಸಿಕೊಂಡು "ನಿಮಗೆ ವಿದ್ವಾಂಸನೂ ವೇದವಿದ್ಯಾಪಾರಂಗತನಾದ ಅಲ್ಪಾಯುಷಿಯಾದ ಪುತ್ರನು ಬೇಕೋ ಅಥವಾ ಮೂಢನೂ ನಿರಕ್ಷರಕುಕ್ಷಿಯೂ ಆದ ದೀರ್ಘಾಯು ಪುತ್ರನು ಬೇಕೋ" ಎಂದು ಕೇಳಿದನು. "ನಮಗೆ ಅಲ್ಪಾಯುವಾದರೂ ಚಿಂತೆಯಿಲ್ಲ. ವಿದ್ಯಾಸಂಪನ್ನನಾದ ಪುತ್ರನು ಬೇಕು" ಎಂದು ಅರುಹಿದರು. ಈಶ್ವರನು "ತಥಾಸ್ತು" ಎಂದು ವರವನ್ನು ನೀಡಿ ಅದೃಶ್ಯನಾದನು. ಆದ್ದರಿಂದ ನಂದನ ನಾಮ ಸಂವತ್ಸರ ವೈಶಾಖದ ಶುದ್ಧ ಪಂಚಮಿಯಂದು ಕ್ರಿ.ಶ. 788 ರಲ್ಲಿ ಆರ್ಯಾಂಬೆಗೆ ಶುಭಯೋಗದಲ್ಲಿ ಸುಪುತ್ರನ ಜನನವಾಯಿತು. ಮಗುವಿಗೆ ಶಂಕರನೆಂದು ನಾಮಕರಣ ಮಾಡಿದರು. 'ಶಂ' ಎಂದರೆ 'ಸುಖ ನೀಡುವವನೆಂದೂ 'ಕರ' ಎಂದರೆ ಜಗತ್ತನ್ನೇ ಉದ್ಧರಿಸುವ ಪರಮೇಶ್ವರನೆಂದೇ ಅರ್ಥೈಸುವ ಶಂಕರ ಎಂಬ ಹೆಸರು ಎಷ್ಟು ಅರ್ಥಗರ್ಭಿತವಾಗಿದೆ ಅಲ್ಲವೇ? ಪರಬ್ರಹ್ಮ ಜ್ಯೋತಿಯಾದ ಶಂಕರನಿಗೆ ನೆತ್ತಿಯಲ್ಲಿ ಚಂದ್ರಲೇಖೆಯೂ, ಹಣೆಯಲ್ಲಿ ಕಣ್ಣಿನ ಗುರುತೂ, ತೋಳಿನಲ್ಲಿ ತ್ರಿಶೂಲದ ಚಿಹ್ನೆಯೂ ಕಾಣಿಸಿಕೊಂಡು ಮೈಯೆಲ್ಲಾ ಸ್ಫಟಿಕದಂತೆ ಕಂಗೊಳಿಸುತ್ತಿತ್ತು. ನೋಡಿದವರೆಲ್ಲ ಈಶ್ವರಸಂಭೂತನೇ ಎಂದು ಭಾವಿಸಿದರು.

ಶಿವಗುರು ವೃದ್ಧಾಪ್ಯದ ದೆಸೆಯಿಂದ ತೀರಿಕೊಳ್ಳುತ್ತಾನೆ. ಶಂಕರ ಮೊದಲನೇ ವರ್ಷದಲ್ಲೇ ಓದಲು ಕಲಿತ. ಎರಡನೇ ವರ್ಷದಲ್ಲಿ ಸ್ಪಷ್ಟವಾಗಿ ಮಾತನಾಡುತ್ತಿದ್ದ. ಮೂರನೇ ವರ್ಷದಲ್ಲೇ ವೇದಮಂತ್ರಗಳನ್ನೆಲ್ಲಾ ಉಚ್ಚರಿಸುತ್ತಿದ್ದನು. 5 ವರ್ಷ ತುಂಬುವಷ್ಟರಲ್ಲೇ ಚತುರ್ವೇದಗಳನ್ನರಿತ ಶಂಕರನಿಗೆ ಆರ್ಯಾಂಬೆ ಉಪನಯನ ಸಂಸ್ಕಾರ ಬ್ರಾಹ್ಮಣರಿಂದ ಮಾಡಿಸುತ್ತಾಳೆ. 8 ನೇ ವರ್ಷ ತುಂಬುವಷ್ಟರಲ್ಲಿ ಶಂಕರ ಚತುರ್ವೇದ ಪಂಡಿತನೆನಿಸಿ ಸಮಸ್ತ ವಿದ್ಯೆಗಳನ್ನು ಅರಿತವನಾಗಿದ್ದನು.

ಶಂಕರ ಭಿಕ್ಷಾಪಾತ್ರೆ ಹಿಡಿದುಕೊಂಡು ನೆರೆಮನೆಗೆ ಭಿಕ್ಷೆ ಕೇಳಲು ಬರುತ್ತಾನೆ. ಬ್ರಾಹ್ಮಣಿ ತನ್ನಲ್ಲಿ ಒಂದೇ ಒಂದು ಒಣನೆಲ್ಲಿ ಇದೆ. ಅದನ್ನು



ಹೇಗೆ ಭಿಕ್ಷೆಯಾಗಿ ಕೊಡುವುದು ಎಂದು ಆಲೋಚಿಸುತ್ತಾಳೆ. ನೆಲ್ಲಿಕಾಯಿ ಅಂದರೆ ನನಗೆ ಬಲು ಇಷ್ಟ. ಅದನ್ನೇ ಕೊಟ್ಟುಬಿಡು ಅಂದನು ಶಂಕರ. ಬ್ರಾಹ್ಮಣಿ ತರಲು ಒಳಗೆ ಹೋಗುವಳು. ಆಗ ಶಂಕರ ಲಕ್ಷ್ಮೀದೇವಿಯನ್ನು ಸ್ತುತಿಸುತ್ತಾನೆ– ***ಅಂಗಂ ಹರೇಃ ಪುಲಕ ಭೂಷಣಮಾಶ್ರಯಂತೀ, ಭೃಂಗಾಂಗ ಮುಕುಲಾಭರಣಂ ತಮಾಲಂ। ಅಂಗೀಕೃತಾಖಿಲವಿಭೂತಿರ ಪಾಂಗಲೀಲಾ, ಮಾಂಗಲ್ಯದಾಸ್ತು ಮಮ ಮಂಗಲ ದೇವತಾಯಾಃ॥*** ಅರ್ಥ ಹೀಗಿದೆ – ಹೆಣ್ಣು ಭ್ರಮರವು ತಮಾಲ ವೃಕ್ಷದ ನವಚಿಗುರುಗಳನ್ನು ಆನಂದದಿಂದ ಆಶ್ರಯಿಸುತ್ತದೆ. ಅದೇ ರೀತಿ ಮಂಗಳದೇವತೆಯಾದ ಮಹಾಲಕ್ಷ್ಮಿಯ ಕಟಾಕ್ಷವು ವಿಷ್ಣುವಿನ ದೇಹವನ್ನು ಆಶ್ರಯಿಸುತ್ತದೆ. ಮಹಾಲಕ್ಷ್ಮಿಯು ಶ್ರೀಹರಿಯ ಕಡೆಗೆ ತನ್ನ ಕುಡಿಗಣ್ಣಿನಿಂದ ನೋಡಿದಾಗ ಆತನ ದೇಹವು






ರೋಮಾಂಚನವಾಗುತ್ತದೆ. ಇಂತಹ ಸಕಲ ವೈಭವವನ್ನು ಕರುಣಿಸುವ ಸಾಮರ್ಥ್ಯವಿರುವ ಶ್ರೀಲಕ್ಷ್ಮಿಯ ಕರುಣಾಕಟಾಕ್ಷವು ನನ್ನ ಪಾಲಿಗೆ ಶುಭಕರವಾಗಲಿ. ಹೀಗೆ ಇಪ್ಪತ್ತೊಂದು ಪದ್ಯಗಳಿಂದ 'ಕನಕಧಾರಾ' ವನ್ನು ಸ್ತುತಿಸಿದಾಗ ಮಹಾಲಕ್ಷ್ಮೀ ಪ್ರತ್ಯಕ್ಷಳಾಗುತ್ತಾಳೆ. ದೇವಿ ಪ್ರಸನ್ನಳಾಗಿ ಚಿನ್ನದ ನೆಲ್ಲಿಕಾಯಿಯ ಮಳೆಗರೆಯುತ್ತಾಳೆ. ಬ್ರಾಹ್ಮಣಿ ಆಶ್ಚರ್ಯದಿಂದ ಚಿನ್ನದ ನೆಲ್ಲಿಕಾಯಿ ಹೆಕ್ಕುತ್ತಾ, 'ಶಂಕರ, ನಾನೆಂಥ ಭಾಗ್ಯವಂತಳು. ನನ್ನ ಬಡತನವನ್ನೇ ಹೋಗಲಾಡಿಸಿದಿ. ಶಿವಶಿವಾ, ಹರಹರಾ,' ಎಂದು ಹೇಳುತ್ತಾಳೆ.

ಒಮ್ಮೆ ನದೀ ತೀರದಿಂದ ಬಿಂದಿಗೆಯಲ್ಲಿ ನೀರು ತರುವಾಗ ಆರ್ಯಾಂಬೆ ಎಡವಿ ಬೀಳುತ್ತಾಳೆ. ಇದನ್ನು ನೋಡಿ ಶಂಕರ– 'ಪೂರ್ಣಾದೇವಿ ಯಾಕೆ ನನ್ನ ತಾಯಿಗಿಷ್ಟು ಕಷ್ಟಕೊಡುತ್ತಿರುವೆ. ಬಾ, ನಮ್ಮ ಅಂಗಳಕ್ಕೆ ಹರಿದು ಬಾ, ಬಾ ತಾಯಿ ಬೇಗ ಬಾ'–ಎನ್ನುವ ಸ್ತೋತ್ರ ಹೇಳುತ್ತಾನೆ. ***ದೇವಿ ಸುರೇಶ್ವರಿ ಭಗವತಿ ಗಂಗೇ ತ್ರಿಭುವನತಾರಿಣಿ ತರಲ ತರಂಗೇ। ಶಂಕರಮೌಲಿವಿಹಾರಿಣಿ ವಿಮಲೇ ಮಮ ಮತಿರಾಸ್ತಾಂ ತವಪದ ಕಮಲೇ॥***

ಅಂದರೆ, ಹೇ ಗಂಗಾದೇವಿಯೇ, ದೇವತೆಗಳ ರಕ್ಷಕಿಯೇ, ಷಡ್ವೈಶ್ವರ್ಯ ಪರಿಪೂರ್ಣಳೇ, ಮೂರು ಲೋಕದವರಿಗೂ ಸಂಸಾರದಾಟಲು ನೆರವಾಗುವವಳೇ, ಮಿನುಗುತ್ತಿರುವ ಅಲೆಗಳಿರುವವಳೇ, ಶಂಕರನ ಜಡೆಯಲ್ಲೇ ವಿಹರಿಸುತ್ತಿರುವವಳೇ, ಕಲ್ಮಶ ರಹಿತಳೇ, ನನ್ನ ಬುದ್ಧಿಯು ಸದಾ ನಿನ್ನ ಪಾದಕಮಲಗಳಲ್ಲಿ ನೆಲೆಸಿರಲಿ ಎನ್ನುತ್ತಿರುವಾಗ ಪೂರ್ಣಾನದಿ ಶಂಕರನ ಮನೆ ಅಂಗಳಕ್ಕೆ ಹರಿದು ಬರುತ್ತಾಳೆ. ಅಗ್ರಹಾರದ ಜನರೆಲ್ಲ ಆಶ್ಚರ್ಯಚಕಿತರಾಗುತ್ತಾರೆ. ಆರ್ಯಾಂಬೆ ಹೇಳಿದಳು – "ನಿನ್ನಂಥ ಮಗನನ್ನು ಪಡೆದ ನಾನು ನಿಜವಾಗಿಯೂ ಪುಣ್ಯವಂತಳು. ನಿನ್ನ ಕೀರ್ತಿ ಅಚಂದ್ರಾರ್ಕವಾಗಿ ಉಳಿಯಲಿ"

ಒಂದು ಸಲ ಹೀಗೊಂದು ಘಟನೆ ನಡೆಯಿತು: ಸಲಿಲೆ ಪೂರ್ಣಾ ನದಿಯಲೊಂದು ದಿನ ಸ್ನಾನವ ಗೈಯೆ, ಮೊಸಳೆ ಕಾಲೆಳೆಯುತಿರೆ, ಕೇಳುವನು ಮಾತೆಯನು, ಎಳೆಯುತಿರೆ ಮೊಸಳೆ ಜೀವನ ಕರ್ಮಫಲ ಸೆಳೆದಂತೆ, ತೊಲಗುವುದು ***ಮೊಸಳೆ ನೀನನುಮತಿಯು ನೀಡಲೆನಗೆ॥ ಸಂದಿಗ್ಧದಲಿ ಸಿಲುಕಿ ದುಃಖಾತಿಶಯದಿಂದ, ಸನ್ಯಾಸಿಯಾಗೆನುತ ಮಾತೆ ಅಪ್ಪಣೆ ಕೊಡಲು, ಬಂಧನದಿ ಬಿಡುಗಡೆ ಹೊಂದಿ ಮೊಸಳೆ ರೂಪದಿಂದ ಬಂದ, ಗಂಧರ್ವಗೆ ಶಾಪ ಪರಿಹರಿಸಿ ಸದ್ಗತಿಯಿತ್ತನು॥*** ಆಗ ಅಲ್ಲಿಗೆ ಆಗಮಿಸಿದ ಋಷಿ ನುಡಿದನು – "ತಾಯೇ, ಈತ ಪರಶಿವನ ಅವತಾರ ತಳೆದು ಬಂದವನು.



ಮುಂದೆ ಜಗದ್ಗುರುವೆಂದೆನಿಸಿಕೊಳ್ಳಲಿರುವ ಅಸಮಾನ್ಯ ಅವತಾರ. ಇವನಿಗೆ ಆಯುಸ್ಸು ಬರೇ 8 ವರ್ಷ, ಆದರೆ ಇವನ ಅನುಷ್ಠಾನ ಹಾಗೂ ತಪಹ ಶಕ್ತಿಯಿಂದಾಗಿ ಇವನಿಗೆ ಇನ್ನೂ 8 ವರ್ಷ ಆಯುಸ್ಸು ಹೆಚ್ಚುವುದು. ಆಮೇಲೆ ಇವನ ಅದ್ವಿತೀಯ ಲೋಕ ಸೇವೆಯಿಂದಾಗಿ ತಪಸ್ವಿಗಳೊಬ್ಬರಿಂದಾಗಿ ಇವನಿಗೆ ಮತ್ತೊಮ್ಮೆ 16 ವರ್ಷ ಆಯುಸ್ಸು ಲಭಿಸುವುದು. ಅಷ್ಟರಲ್ಲೇ ಇವನು ಸನಾತನ ಧರ್ಮ ಪ್ರಚಾರಗೈಯುತ್ತಾ ಜಗದ್ಗುರು ಎಂದೆನಿಸಿಕೊಳ್ಳುವನು. ಇವನಿಗೆ ಸನ್ಯಾಸ ಧರ್ಮ ಸ್ವೀಕರಿಸಲು ಸಂಪೂರ್ಣ ಸಹಕಾರ ನೀಡು". 'ನೀನು ನನ್ನನ್ನು ನೋಡಬೇಕೆಂದು ಎಣಿಸಿದ ತಕ್ಷಣವೇ ನಾನು ಇಲ್ಲಿಗೆ ಬಂದು ಬಿಡುತ್ತೇನೆ. ಭಯಪಡದಿರು ಅಮ್ಮ. ಭಗವಂತ ನಿನ್ನನ್ನು ಸಲಹುತ್ತಾನೆ. ಮನಸಾರೆ ಆಶೀರ್ವದಿಸು. ಮಾತೃದೇವೋಭವ' ಎನ್ನುತ್ತಾ ಶಂಕರ ಅಲ್ಲಿಂದ ಹೊರಟೇ ಬಿಟ್ಟನು.

ಕೆಲವು ತಿಂಗಳ ಕಾಲ ದೇಶಾದ್ಯಂತ ಸಂಚರಿಸಿ ಶಂಕರ ಮಂಧಾಪರ್ವತ ಪ್ರದೇಶದ ಕಾನನಕ್ಕೆ ಬಂದನು. ಕಾನನದಲ್ಲಿರುವ ಒಂದು ಗುಹೆಯಲ್ಲಿ ಆದಿಶೇಷನ ಅವತಾರಿ, ಸತ್ಪುರುಷ ಗೋವಿಂದ ಭಗವತ್ಪಾದರು ಇದ್ದರು. ಇವರನ್ನು 'ನಿರ್ವಾಹಣ ದಶಕ' ಸ್ತೋತ್ರವನ್ನು ರಚಿಸಿ ಸ್ತುತಿಸಿದನು. ಕೇವಲ



(3ನೇ ಪುಟಕ್ಕೆ...)

ಶುಭಾಶಯಗಳೊಂದಿಗೆ
ಡಾ। ವಿಜಯಾ ರಾವ್ ವೈ.ಬಿ
ಎಂ.ಬಿ.ಬಿ.ಎಸ್; ಡಿ.ಜಿ.ಒ.(ಡಿ.ಎನ್.ಬಿ)
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

ಗಾಂಧಿ ಆಸ್ಪತ್ರೆ ಹಾಗೂ ಸುನಾಗ್ ಆಸ್ಪತ್ರೆ ಉಡುಪಿಯಲ್ಲಿ ಸಂದರ್ಶನಕ್ಕಾಗಿ ಲಭ್ಯ
ಫೋನ್ : 9448164327


With Best Compliments from :
Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

With Best Compliments From :
BUILDING DREAMS, ENHANCING LIVES.

NAKSHATRA
GANDHINAGAR

SOLITAIRE
HATHILL,

HABITAT ONE 54
An Urban Lifestyle
DEREBAIL

ANANTESSH
CAR STREET,
Land® Trades
BUILDERS & DEVELOPERS
BUILDING TRUST, DELIVERING VALUE
MANGALURU'S LEADING REAL ESTATE COMPANY
RESIDENTIAL | COMMERCIAL | PLOTS
For More Details : 8882 777 444 | 0824 2425424, 2423866 | www.landtrades.in
Follow us on :

ಶಿವನೇ ನಾನು. ನಾನು ಸರ್ವ ವ್ಯಾಪಕನು, ತತ್ವಸ್ವರೂಪನು, ಸ್ವತಃಸಿದ್ಧನು. ನಾನು ಎಂದೆಂಬುದೂ ಇಲ್ಲ. ಆದರೆ ಇಲ್ಲವೆಂದಾಗ ಶೂನ್ಯವೂ ಅಲ್ಲ. ಅಶೂನ್ಯವೂ ಅಲ್ಲ. ಅದೇ ಅದ್ವೈತ. ಅಂತಹ ಶಿವನೇ ನಾನಾಗಿರುವೆನು ಎಂದು ಶಂಕರನು ನುಡಿದನು. ಶಂಕರನ ವಾಕ್‌ಚಾತುರ್ಯವನ್ನು ಕೇಳಿದ ಗೋವಿಂದ ಭಗವತ್ಪಾದರು ಸನ್ಯಾಸ ದೀಕ್ಷೆಯನ್ನು ನೀಡಿ ಶಂಕರನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ನಾಲ್ಕು ವೇದಗಳಿಂದ ಆಯ್ದ ನಾಲ್ಕು ಮಹಾವಾಕ್ಯಗಳನ್ನು ಉಲ್ಲೇಖಿಸುತ್ತ–'ತತ್ವಮಸಿ', 'ಅಹಂ ಬ್ರಹ್ಮಾಸ್ಮಿ' "ಅಯಮಾತ್ಮಾ ಬ್ರಹ್ಮ" ಮತ್ತು "ಪ್ರಜ್ಞಾನಂ ಬ್ರಹ್ಮ" ಎಂದು ಹೇಳಿದರು. ಜ್ಞಾನವೆಂದರೆ ಆತ್ಮಜ್ಞಾನ. ಇವೆಲ್ಲವುಗಳ ಅರ್ಥವನ್ನು ಅನುಭವಕ್ಕೆ ತಂದುಕೊಂಡ ಬ್ರಹ್ಮಜ್ಞಾನ ಪ್ರಾಪ್ತಿಯಾಗಿ ಆತ್ಮನು ಬ್ರಹ್ಮವೇ ಆಗುತ್ತಾನೆ. "ಬ್ರಹ್ಮವಿತ್ ಬ್ರಹ್ಮೈವ ಭವತಿ" ಎಂದು ಮುಂಡಕೋಪನಿಷತ್ತಿನಲ್ಲಿ ಹೇಳಿದ "ಬ್ರಹ್ಮಂ ಸತ್ಯಂ ಜ್ಞಾನಮನಂತಂ" ಎಂದು ಯಜುರ್ವೇದದಲ್ಲಿ ಉಲ್ಲೇಖವಿದೆ ಎಂದು ಶಂಕರನಿಗೆ ಗುರುಗಳು ಉಪದೇಶಿಸಿದರು. ನರ್ಮದಾ ತೀರದ ಆಶ್ರಮದಲ್ಲಿ ಶಂಕರ ಧ್ಯಾನಮಗ್ನನಾಗಿದ್ದಾಗ ಒಂದು ವಿಶೇಷ ಘಟನೆ ನಡೆಯಿತು. ನರ್ಮದೆ ಸಿಟ್ಟಿನಿಂದ ಉಕ್ಕೇರಿ ಪ್ರಳಯಾಂತಕಾರಿಯಾದಳು. ಭಯ ಪಡಬೇಡಿ. "ಅಹಂ ಬ್ರಹ್ಮಾಸ್ಮಿ". ಮಾತಾ ನರ್ಮದಾ ಶಾಂತಳಾಗು ಎಂದು ಹೇಳುತ್ತಾ ನರ್ಮದಾಷ್ಟಕವನ್ನು ರಚಿಸಿ ಶಂಕರನು ಸ್ತುತಿಸಿದನು. ಆಗ ನರ್ಮದಾ ಶಂಕರನ ಕಮಂಡಲವನ್ನು ಪ್ರವೇಶಿಸಿ ಅಂತರ್ಧಾನಳಾದಳು. ಸಿಟ್ಟಿನಿಂದ ಭೋರ್ಗರೆದು ಭುವಿಗಿಳಿದ ಗಂಗೆ ಇಡೀ ಭೂಮಂಡಲವನ್ನೇ ನಾಶಮಾಡುವೆನೆಂದಾಗ ಸಾಕ್ಷಾತ್ ಶಿವನೇ ಧರೆಗಿಳಿದು ಗಂಗೆಯನ್ನು ತನ್ನ ಜಟಾಮುಕುಟದಲ್ಲಿ ಬಂಧಿಸಿದ. ಈಗ ಪ್ರವಾಹ ರೂಪದಲ್ಲಿ ಹರಿಯುತ್ತಿರುವ ನರ್ಮದೆಯನ್ನು ಶಂಕರ ಕಮಂಡಲುವಿನಲ್ಲಿ ಬಂಧಿಸಿದ. ಲೋಕದ ಜನರ ಹಿತದೃಷ್ಟಿಯಿಂದ ನರ್ಮದೆಯನ್ನು ಬಿಡುಗಡೆ ಮಾಡಲು ಗೋವಿಂದ ಭಗವತ್ಪಾದರು ಶಂಕರನನ್ನು ಆಗ್ರಹಿಸಿದರು. "ಪರಶಿವನ ಪರಮಾವತಾರಿಯಾದ ನೀನು ಪರಮ ಶ್ರೇಷ್ಠ ಗುರುವಾಗಿ ಜಗತ್‌ಪ್ರಸಿದ್ಧನಾಗು. ಶಂಕರಾ, ನೀನಿನ್ನು ಕಾಶಿ ಕ್ಷೇತ್ರಕ್ಕೆ ತೆರಳು. ಅಲ್ಲಿ ನೆಲೆಸಿರುವ ನಾರಾಯಣ ಸ್ವರೂಪಿ ಬಾದರಾಯಣ ವ್ಯಾಸರು ರಚಿಸಿದ ಶಾರೀರಿಕ ಮೀಮಾಂಸೆ ಮತ್ತು ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದು ಆತ್ಮವಿದ್ಯೆಯನ್ನು ಇಡೀ ಲೋಕಕ್ಕೆ ಪ್ರಚಾರ ಮಾಡು" ಎಂದು ಹರಿಸಿದರು. ಗುರು ಗೋವಿಂದ ಭಗವತ್ಪಾದರ ಶಿಷ್ಯತ್ವವನ್ನು ಪಡೆದು ಪುನೀತನಾದ ಶಂಕರ ಆಶ್ರಮದಿಂದ ನಿರ್ಗಮಿಸಿದನು.

ಶಂಕರ ಶಿಷ್ಯ ಸಹಿತ ಗಂಗಾ ತೀರಕ್ಕೆ ಬಂದು ಗಂಗೆಗೆ ನಮಸ್ಕರಿಸಿದನು. ಗಂಗಾಸ್ನಾನ ಗೈದ ಶಂಕರ ಕಾಶಿ ವಿಶ್ವನಾಥನ ದರ್ಶನ ಗೈದು ಅವನ ಸಮ್ಮುಖದಲ್ಲೇ ವಿಶ್ವನಾಥ ಸ್ತೋತ್ರ ರಚಿಸಿದ. ವಿಶ್ವನಾಥನ ದರ್ಶನ ಮುಗಿಸಿ ಹೊರಬರುವಾಗ ಒಬ್ಬ ಯುವಕ 'ಡುಕೃಞಕರಣೆ' ಎಂದು ಆಗಾಗ ಉಚ್ಚರಿಸುತ್ತಾ ಇರುತ್ತಾನೆ. ಈ ವ್ಯಾಕರಣ ಜೀವನಾಂತ್ಯದಲ್ಲಿ ಬರುವ ಮರಣವನ್ನು ತಪ್ಪಿಸುವುದಿಲ್ಲ. ಆತ್ಮವಿದ್ಯೆ ಅಥವಾ ಬ್ರಹ್ಮವಿದ್ಯೆ ಅರಿತವನು ಬ್ರಹ್ಮಜ್ಞಾನಿ ಎನಿಸುವನು. ನಾನು ಹೇಳುವ 'ಚರ್ಪಟಮಂಜರಿಕಾ' ಸ್ತೋತ್ರವನ್ನು ದಿನಾಲೂ ಪಠಿಸು. ಅದನ್ನು ಅರ್ಥೈಸುವ ಪ್ರಯತ್ನ ಮಾಡಬೇಕೆಂದು ಶಂಕರನು ಉಪದೇಶಿಸಿದನು ಮತ್ತು ಮೋಹ–ಮುದ್ಗರವನ್ನು ತಿಳಿಸಿದನು:

***ಭಜ ಗೋವಿಂದಂ ಭಜ ಗೋವಿಂದಂ***
***ಗೋವಿಂದಂ ಭಜ ಮೂಢಮತೇ।***
***ಸಂಪ್ರಾಪ್ತೇ ಸನ್ನಿಹಿತೇ ಕಾಲೇ***
***ನಹಿ ನಹಿ ರಕ್ಷತಿ ಡುಕೃಞ್ಕರಣೇ॥***
***ಅಂದರೆ, ಗೋವಿಂದನ ನೆನೆ, ನೆನೆ ಗೋವಿಂದನ***
***ಗೋವಿಂದನ ನೆನೆ ಮೂಢಮನ***
***ಕಾಲ ಸಮೀಪಿಸಿ ಬಂದರೆ ಇಲ್ಲವು***
***ರಕ್ಷಿಸವೆಂದಿಗು ವ್ಯಾಕರಣ!***

ಈ ಮೊದಲ ಪದ್ಯವನ್ನು ಪಲ್ಲವಿ ಎಂದು ಪರಿಗಣಿಸಲಾಗಿದೆ. ಸಾಮಾನ್ಯವಾಗಿ ಇದು ಮುಂದೆ ಹೇಳಲಾಗಿರುವ ಪ್ರತಿಯೊಂದು ಪದ್ಯದ ಕೊನೆಯಲ್ಲೂ ಪುನರಾವರ್ತನೆಗೊಳ್ಳುತ್ತದೆ. ಪಲ್ಲವಿ ಪದ್ಯವಾದ ಮೇಲೆ 12 ಪದ್ಯಗಳ ಕರ್ತೃ ಶ್ರೀ ಶಂಕರಾಚಾರ್ಯರು ಎಂಬ ನಂಬಿಕೆ ಇದೆ. ಇವುಗಳಿಗೆ 'ದ್ವಾದಶ ಮಂಜರಿಕ ಸ್ತೋತ್ರಂ' ಎನ್ನುವ ಹೆಸರಿದೆ. ಗುರುಗಳು ರಚಿಸಿದ ಈ ಸ್ತೋತ್ರಗಳಿಂದ ಸ್ಫೂರ್ತಿಗೊಂಡು ಅವರ 14 ಮಂದಿ ಶಿಷ್ಯರಲ್ಲಿ ಪ್ರತಿಯೊಬ್ಬರೂ ಒಂದೊಂದು ಪದ್ಯವನ್ನು ರಚಿಸಿದ್ದಾರೆ. ಆದ್ದರಿಂದಲೇ ಈ ಪದ್ಯಗಳು 'ಚತುರ್ದಶಿ ಮಂಜರಿಕ ಸ್ತೋತ್ರಂ' ಎಂಬ ಹೆಸರಿನಿಂದ ಇಂದಿಗೂ ಪ್ರಖ್ಯಾತವಾಗಿರುವುದು. ಈ 14 ಪದ್ಯಗಳನ್ನು ಕೇಳಿದ ಮೇಲೆ ಶ್ರೀ ಶಂಕರಾಚಾರ್ಯರು ಎಲ್ಲಾ ಕಾಲದ ಎಲ್ಲ ನಿಜವಾದ ಸಾಧಕರನ್ನು ಕೊನೆಯ ನಾಲ್ಕು ಪದ್ಯಗಳಲ್ಲಿ ಆಶೀರ್ವದಿಸಿದ್ದಾರೆ. 11 ನೇ ಪದ್ಯ ಹೀಗಿದೆ:

***ಮಾಕುರು ಧನಜನಯೌವನ ಗರ್ವಂ***
***ಹರತಿ ನಿಮೇಷಾತ್ ಕಾಲ ಸರ್ವಮ್***
***ಮಾಯಾಮಯಮಿದ ಮಖಿಲಂ ಬುದ್ಧ್ವಾ***
***ಬ್ರಹ್ಮಪದಂ ತ್ವಂ ಪ್ರವಿಶವಿತ್ವಾ॥***
**ಅಂದರೆ: ಧನ ಜನ ಯೌವನ–ಹೆಮ್ಮೆಯ ಬಿಡು ನೀ**
***ಕಾಲಕಿದೆಲ್ಲವು ನಿಮಿಷದ್ದು!***
***ಮುತ್ತಿದ ಮಾಯೆಯ ಕಿತ್ತೊಗೆದೆಲ್ಲವ***
***ಹೊಗು ನೀ ಬ್ರಹ್ಮದ ಸರಹದ್ದು.***

'ಭಜಗೋವಿದಂ ಸ್ತೋತ್ರವನ್ನು ಕೇಳುತ್ತಿದ್ದ ಯುವಕ ಶಂಕರನ ಮಾತಿಗೆ ಒಪ್ಪಿ ಉದ್ದಂಡ ನಮಸ್ಕಾರ ಮಾಡಿದ. ದೈವ ಚಿಂತನೆಯನ್ನು ತನ್ನ ಅಂತರಂಗದಲ್ಲಿ ತುಂಬಿಕೊಳ್ಳಬೇಕೆಂದು ಅವನು ಅರಿತನು. ಬ್ರಹ್ಮಜ್ಞಾನದ ಅರಿವು ಅವನಲ್ಲಿ ಮೂಡಿತು.

ಶಂಕರ ವಿಶ್ವನಾಥ ದೇವಸ್ಥಾನದಿಂದ ಬರುತ್ತಿರುವಾಗ ಬ್ರಹ್ಮಚಾರಿಯೊಬ್ಬ, ತಾನು ನರಸಿಂಹ ಸ್ವಾಮಿಯ ಭಕ್ತ. ವಿಷ್ಣುಶರ್ಮನೆಂದು ತನ್ನನ್ನು ಕರೆಯುತ್ತಾರೆ. ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಹೇಳಿದ. ಶಂಕರ ಅವನನ್ನು ಪ್ರಥಮ ಶಿಷ್ಯನನ್ನಾಗಿ ಸ್ವೀಕರಿಸಿ ಸನಂದನನೆಂಬ ಹೆಸರಿನಿಂದ ಕರೆದ. ಎಲ್ಲರಿಗೂ ಮುಂದೆ ಹೋಗುತ್ತಿರುವಾಗ ದಾರಿಯಲ್ಲೊಬ್ಬ ಚಾಂಡಾಲ ಎದುರಾಗುತ್ತಾನೆ. ಅವನನ್ನು ದೂರ ಸರಿಯಲು ಶಿಷ್ಯನೊಬ್ಬ ಹೇಳಿದನು. ಇವನು ಬ್ರಾಹ್ಮಣ, ಇವನು ಚಾಂಡಾಲ ಎನ್ನುವ ದೇಹದೊಳಗಿರುವ ಆತ್ಮಕ್ಕೆ ವ್ಯತ್ಯಾಸ ಇದೆಯೇ ಎಂದು ಚಾಂಡಾಲ ಕೇಳಿದನು. ಆತ್ಮಜ್ಞಾನವನ್ನು ಅರಿತ ನೀನು ಪರಮವೇದ್ಯನು ಎಂದು ಶಂಕರ ಶಿರಬಾಗಿ ನಮಸ್ಕರಿಸುತ್ತಾನೆ. ಆಗ ಸಾಕ್ಷಾತ್ ಶಿವನೇ ಪ್ರತ್ಯಕ್ಷನಾಗುತ್ತಾನೆ. ಅಜ್ಞಾನ ತೊಲಗಿದ ಹಾಗೆ ಆತ್ಮ ಒಂದೇ ಎನ್ನುವ ಜ್ಞಾನ ಅರಿವಾಗುತ್ತದೆ. ಆ ಪವಿತ್ರವಾದ ಅದ್ವೈತ ತತ್ವವನ್ನು ಪ್ರಪಂಚದ ಜನರಿಗೆ ಪ್ರಚಾರ ಮಾಡು ಎಂದು ಶಿವನು ಉಪದೇಶಿಸಿದನು.

ಹನ್ನೆರಡನೇ ವರ್ಷ ಪ್ರಾಯದಲ್ಲಿ ಬದರಿಕಾಶ್ರಮಕ್ಕೆ ಬಂದ ಶಂಕರರು ಬಾದರಾಯಣ ವ್ಯಾಸರ ಬ್ರಹ್ಮ ಸೂತ್ರಗಳಿಗೆ ಭಾಷ್ಯಗಳನ್ನುನ ಬರೆದರು. ಅನಂತರ ಅಲ್ಲಿರುವ ಬ್ರಹ್ಮರ್ಷಿಗಳೊಡನೆ ಚರ್ಚಿಸಿ ದಶೋಪನಿಷತ್ತುಗಳಿಗೂ ಶ್ರೀಮದ್ಭಗವದ್ಗೀತೆಗೂ ಭಾಷ್ಯಗಳನ್ನು ಬರೆದು ಆಚಾರ್ಯಶ್ರೇಷ್ಠರೆನಿಸಿದರು. ಬಳಿಕ ಒಂದು ವಿಶೇಷ ಘಟನೆಯಿಂದಾಗಿ ತನ್ನ ಪರಮಾತ್ಮ ಶಿಷ್ಯನಾದ ಸನಂದನನನ್ನು 'ಪದ್ಮಪಾದ' ಎಂಬುದಾಗಿ ಕರೆದರು. ಕೃಷ್ಣಸ್ವರೂಪಿ ವ್ಯಾಸರನ್ನು ಭೆಟ್ಟಿಯಾದರು. ಈ ಭೌತಿಕ ದೇಹವನ್ನು ತ್ಯಜಿಸುವ ಇರಾದೆಯನ್ನು ಶಂಕರರು ವ್ಯಕ್ತ ಪಡಿಸಿದಾಗ ಕೃಷ್ಣ ದ್ವೈಪಾಯನ ಮುನಿಯು ಹೀಗೆ ಹೇಳಿದನು–ಶಂಕರಾ, ನಿಜವಾಗಿ ನೋಡಿದರೆ ನಿನ್ನ ಆಯಸ್ಸು ಎಂಟೇ ವರ್ಷ. ನಿನ್ನ ಸನ್ಯಾಸದ ಬಲದಿಂದಾಗಿ ಅದು ಹದಿನಾರಾಯಿತು. ಈಗ ನಾನು ಲೋಕಕಲ್ಯಾಣದ ದೃಷ್ಟಿಯಿಂದ ನಿನಗೆ ಇನ್ನೂ ಹದಿನಾರು ವರ್ಷ ಹೆಚ್ಚು ಆಯಸ್ಸನ್ನು ನೀಡುತ್ತಿದ್ದೇನೆ. ನೀನು ಸಾಧಿಸಬೇಕಾದ ಕೆಲಸ ಇನ್ನೂ ಇದೆ. ಪ್ರಯಾಗದಲ್ಲಿ ಕುಮಾರಿಲ ಭಟ್ಟ ಪಂಡಿತನಿಗೆ ನಿನ್ನ ಭಾಷ್ಯಗಳನ್ನು ತೋರಿಸು. ನಿನ್ನ ಭಾಷ್ಯಗಳು ಅಚಂದ್ರಾರ್ಕವಾಗಿ ವಿಜೃಂಭಿಸುತ್ತಿರಲಿ. ಅದ್ವೈತ ತತ್ವವನ್ನು ಪ್ರಚಾರ ಮಾಡುತ್ತಾ ಮತಾಚಾರ್ಯನೆಂದು ಕೀರ್ತಿವಂತನಾಗು'.

ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ಸ್ನಾನಗೈದು ಶಂಕರರು ಕುಮಾರಿಲ ಭಟ್ಟನನ್ನು ಸಂದರ್ಶಿಸಿದರು. ಉಜ್ಜಯಿನಿಯಲ್ಲಿ ಮಹೀಷ್ಮತಿ ನಗರದಲ್ಲಿ ನನ್ನ ಪರಮಶಿಷ್ಯನೂ ಕರ್ಮಠನೂ ಅಸಾಧಾರಣ ವಿದ್ವಾಂಸನೂ ಆದ ಮಂಡನಮಿಶ್ರ ಮತ್ತು ಸಕಲಶಾಸ್ತ್ರ ಪ್ರವೀಣೆ ಸಾಕ್ಷಾತ್ ಸರಸ್ವತಿ ಅವತಾರಿ, ಉಭಯಭಾರತಿ ಎಂಬ ಅವನ ಪತ್ನಿ ಇದ್ದಾರೆ. ಅವನಲ್ಲಿ ವಾದ ಮಾಡಿ ಗೆದ್ದು ಅವನನ್ನು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಿ' ಎಂದು ಕುಮಾರಿಲ ಭಟ್ಟ ಹೇಳಿದನು.

ಮಂಡನ ಮಿಶ್ರನ ಮನೆಯ ಎದುರು ಅಂಗಳದಲ್ಲಿ ತೂಗುವ ಪಂಜರಗಳಲ್ಲಿ ಗಿಳಿಗಳು ಚರ್ಚಿಸುತ್ತಿದ್ದುವು. ಮಂಡನಮಿಶ್ರನು ಪಿತೃವಿನ ಶ್ರಾದ್ಧ ಕರ್ಮದಲ್ಲಿ ನಿರತನಾಗಿದ್ದ. ಶ್ರಾದ್ಧವಾದ ಬಳಿಕ ಅನ್ನ ಸ್ವೀಕಾರ ಮಾಡಿ ಶಂಕರರು ಮತ್ತು ಮಂಡನ ಮಿಶ್ರ ವಾದಕ್ಕಿಳಿದರು. 'ಬ್ರಹ್ಮಂ ಸತ್ಯ, ಜಗತ್ ಮಿಥ್ಯಾ, ಜೀವೋ ಬ್ರಹ್ಮೈವ ನಾ ಪರಃ' ಎಂಬ ಶೃತಿಯಂತೆ ಬ್ರಹ್ಮವೊಂದೇ ಸತ್ಯ. ಈ ಜಗತ್ತು ಮಿಥ್ಯೆ. ಸಕಲ ಜೀವಿಗಳಲ್ಲಿರುವವನು ಆ ಪರಮಾತ್ಮನೇ ಎಂಬುವುದನ್ನು ನಾನು ಶೃತಿ–ಸ್ಮೃತಿ ಶಾಸ್ತ್ರಾನುಭವಗಳಿಂದ ಸಾಧಿಸುತ್ತೇನೆ'. ಹೀಗೆ ವಾದವಾದಾಗ ಮಂಡನ ಮಿಶ್ರ ತನ್ನ ಸಂದೇಹಗಳು ಪರಿಹಾರವಾದುವು ಎಂದನು. 'ಎಲೈ ಸನ್ಯಾಸಿಯೇ, ಈ ಪ್ರಪಂಚಕ್ಕೆ ಮೂಲವಾದ, ಧರ್ಮದ ಚಾಲನೆಗೆ ಕಾರಣವಾದ, ಕಾರ್ಯಾಚರಣೆಯನ್ನು ಅಲ್ಲಗಳೆಯುತ್ತೀಯಲ್ಲಾ, ಪ್ರಕೃತಿ ರೂಪಿಯಾದ ಸ್ತ್ರೀಯರ ಬಗ್ಗೆ ನಿನಗೆ ಏನು ತಿಳಿದಿದೆ? ಕಾಮಕೇಲಿಯ ಬಗ್ಗೆ ನಿನಗೆ ಏನು ತಿಳಿದಿದೆ? ಹೇಳು 'ಎಂದು ಉಭಯಭಾರತಿ ಅಬ್ಬರಿಸಿದಳು. ಶಂಕರರು ಈ ಜಟಿಲವಾದ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ನಾನರಿತು ಬರುವೆ ಎಂದು ಒಂದು ತಿಂಗಳ ಕಾಲಾವಕಾಶವನ್ನು ಕೊಡಬೇಕೆಂದು ಕೇಳಿಕೊಂಡರು.

ಉಜ್ಜಯಿನಿ ನಗರದ ಅರಸ ತೀರಿಕೊಂಡಿದ್ದ. ಇದೇ ಸುಸಂದರ್ಭವೆಂದರಿತ ಶಂಕರರು ಪರಕಾಯ ಪ್ರವೇಶದ ರಹಸ್ಯವನ್ನು ತಿಳಿಸದೆ ತನ್ನ ದೇಹವನ್ನು ಸುರಕ್ಷಿತವಾಗಿ ನೋಡಿಕೊಳ್ಳಲು ಪದ್ಮಪಾದನಿಗೆ ತಿಳಿಸಿದರು. ಒಂದು ತಿಂಗಳ ನಂತರ ಶಂಕರರು ಉಭಯಭಾರತಿಯೊಡನೆ, 'ಸರ್ವಶಾಸ್ತ್ರಗಳನ್ನು ಬಲ್ಲವನೇ ಆಗಬೇಕಲ್ಲದೇ



ಅದೆಲ್ಲವನ್ನು ಅನುಭವಿಸಲೇ ಬೇಕೆಂದೇನೂ ಇಲ್ಲ. 64 ವಿದ್ಯೆಗಳಲ್ಲಿ ಪರಕಾಯ ಪ್ರವೇಶ ಪ್ರಯೋಗವನ್ನು ಮಾಡಿಯೇ ಕಾಮಶಾಸ್ತ್ರದ ಬಗ್ಗೆಯೂ ವಿಷಯ ಸಂಪಾದಿಸಿದ್ದೇನೆ' ಎಂದು ಹೇಳಿದರು. ಆತ್ಮವನ್ನು ಅರಿತರೆ ಎಲ್ಲವನ್ನೂ ಅರಿತಂತೆ ಎಂದಳು ಉಭಯಭಾರತಿ. ವಿದ್ಯಾದೇವತೆ, ಸರಸ್ವತಿ, ಸ್ವರೂಪಿಣಿ, ಉಭಯಭಾರತಿ ಮತ್ತು ಮಂಡನ ಮಿಶ್ರ ಇಬ್ಬರೂ ವಾಗ್ಯುದ್ಧದಲ್ಲಿ ಸೋತರು. ಅಲ್ಲಿಗೆ ಮಂಡನ ಮಿಶ್ರನನ್ನು ಶಂಕರರು ತನ್ನ ಎರಡನೇ ಶಿಷ್ಯನನ್ನಾಗಿ ಸ್ವೀಕರಿಸಿ ಇವನು ಸುರೇಶಾಚಾರ್ಯ ಎಂದು ಹೆಸರಿಸಿದರು.

ಭರತಖಂಡದಲ್ಲೇ ಪ್ರಸಿದ್ಧಿ ಪಡೆದ 12 ಜ್ಯೋತಿರ್ಲಿಂಗಗಳಲ್ಲಿ ಒಂದೆನಿಸಿದ ಶ್ರೀಶೈಲ ಸ್ವಾಮಿಯಿದ್ದಲ್ಲಿಗೆ ಶಂಕರಾಚಾರ್ಯರು ತನ್ನ ಶಿಷ್ಯರೊಂದಿಗೆ ಬಂದರು. ಪರಮೇಶ್ವರ, ಮಲ್ಲಿಕಾರ್ಜುನ ರೂಪದಲ್ಲಿ ಲಿಂಗರೂಪಿಯಾಗಿ, ಪಾರ್ವತಿದೇವಿ ಭ್ರಮರಾಂಭೆಯಾಗಿರುವ ಇವರ ದರ್ಶನ ಭಾಗ್ಯವನ್ನು ಪಡೆದರು.

ಶಂಕರಾಚಾರ್ಯರು ತನ್ನ ಶಿಷ್ಯರೊಂದಿಗೆ ದೇಶವೆಲ್ಲಾ ಸುತ್ತಾಡಿ ಹಲವು ಪಂಥದ ನಾಯಕರನ್ನು ಭೇಟಿಯಾದರು. ಪಾಶುಪತ, ಗಾಣಪತ, ಸೌರ, ಶಾಕ್ತ, ಕಾಲ, ಅಘೋರ, ಶೈವ, ಶಿವಾಚಾರ, ವೈಷ್ಣವ, ಬೌದ್ಧ, ಜೈನ ಮೊದಲಾದ ಪಂಥಗಳ ಜನರು ವೇದೋಕ್ತ ಆಗಮನಶಾಸ್ತ್ರ ಪದ್ಧತಿಯಂತೆ ನಡೆಯಲು ಪ್ರಚೋದಿಸಿದರು. ಉಗ್ರ ಭೈರವನೆಂಬ ಕಾಪಾಲಿಕ, ಗುಂಪಿನ ನಾಯಕ, ಶಂಕರಾಚಾರ್ಯರ ತಲೆಯನ್ನು ಕತ್ತರಿಸಿ ದೇವಿಗೆ ಅರ್ಪಿಸಲು ಸಿದ್ಧನಾದನು. ಆದರೆ ಶಿಷ್ಯ ಪದ್ಮಪಾದ ತನ್ನ ಆರಾಧ್ಯ ದೇವತೆಯಾದ ಉಗ್ರ ನರಸಿಂಹನನ್ನು ಪ್ರಾರ್ಥಿಸಿಕೊಂಡನು. ಆಗ ನರಸಿಂಹ ದೇವರು ಪ್ರತ್ಯಕ್ಷನಾಗಿ ಉಗ್ರ ಭೈರವನನ್ನು ಸೀಳುತ್ತಾನೆ. ಆದ್ದರಿಂದ ಪ್ರಾಣಿಬಲಿ, ನರಬಲಿ ಕೊಡುವುದನ್ನು ಬಿಟ್ಟುಬಿಡಲು ಮತ್ತು ಫಲಪುಷ್ಪ ಸ್ತೋತ್ರಗಳಿಂದಲೇ ದೇವಿಯನ್ನು ಆರಾಧಿಸುವಂತಾಗಲಿ ಎಂದರು ಶಂಕರಾಚಾರ್ಯರು.

ಏಳು ಪರ್ವತಗಳನ್ನು ದಾಟಿ ಅತ್ಯಂತ ಉನ್ನತ ಶಿಖರದಲ್ಲಿ ವೆಂಕಟೇಶ್ವರ ನೆಲೆಸಿದ ಪವಿತ್ರಸ್ಥಳಕ್ಕೆ ಶಿಷ್ಯರೊಡಗೂಡಿ ಶಂಕರಾಚಾರ್ಯರು ಬಂದರು. ತನ್ನ ಮಂತ್ರ ಶಕ್ತಿಯಿಂದ ಧನಾಕರ್ಷಣ ಯಂತ್ರವನ್ನು ಸ್ಥಾಪಿಸಿದರು. ತಿರುಪತಿ ತಿಮ್ಮಪ್ಪನೆಂಬ ಹೆಸರಿನಲ್ಲಿ ಈ ಕ್ಷೇತ್ರ ಪ್ರಸಿದ್ಧವಾಯಿತು. ಬಳಿಕ ಗೋಕರ್ಣಕ್ಕೆ ಬಂದರು. ಶಿವನ ಆತ್ಮಲಿಂಗವನ್ನು ರಾವಣನು ಲಂಕೆಗೆ ಕೊಂಡೊಯ್ಯುವಾಗ ದೇವತೆಗಳು ಗಣಪತಿಯನ್ನು ಮುಂದೆ ಮಾಡಿ ಆತ್ಮಲಿಂಗವು ಕಡಲ ತೀರದಲ್ಲಿ ನೆಲೆಸುವಂತೆ ಮಾಡಿದರು. ಲಿಂಗ ಗೋವಿನ ಕರ್ಣಾಕಾರ ಪಡೆದು ಅಲ್ಲೇ ನೆಲೆಸಿತು. ಸಹ್ಯಾದ್ರಿಯ ತಪ್ಪಲಿನ ಕುಟಚಾದ್ರಿಗೆ ಶಂಕರಾಚಾರ್ಯರು ಬಂದರು. ಮೂಕಾಸುರನನ್ನು ನಿಗ್ರಹಿಸಿದ ದೇವಿ ಅವನ ಇಚ್ಛೆಯಂತೆ ಮೂಕಾಂಬಿಕೆಯಾಗಿ ನೆಲೆಸಿದ್ದಾಳೆ. ಶಂಕರಾಚಾರ್ಯರು ಸಿದ್ಧಿಯಂತ್ರವನ್ನು ರಚಿಸಿ ಅದನ್ನು ಅಲ್ಲಿ ಸ್ಥಾಪಿಸಿದರು. ಅಲ್ಲಿ ಏನನ್ನು ಮಾತನಾಡಲರಿಯದ ಹುಡುಗನೊಬ್ಬನನ್ನು ತನ್ನ ಶಿಷ್ಯ ವರ್ಗಕ್ಕೆ ಸೇರಿಸಿ ಹಸ್ತಮಲಕಾಚಾರ್ಯನೆಂದು ನಾಮಕರಣ ಮಾಡಿ ಅವನನ್ನು ಮೂರನೇ ಪ್ರಧಾನ ಶಿಷ್ಯನನ್ನಾಗಿ ಸ್ವೀಕರಿಸಿದರು.

ಸಹ್ಯಾದ್ರಿ ಪರ್ವತಶ್ರೇಣಿಯ ಶೃಂಗ ಪರ್ವತದಲ್ಲಿರುವ ಶೃಂಗೇರಿಗೆ ಶಂಕರಾಚಾರ್ಯರು ಸಂದರ್ಶಿಸಿದರು. ಬಂಡೆಕಲ್ಲಿನ ಮೇಲೆ ಸುಡುಬಿಸಿಲಿಗೆ ಕಪ್ಪೆಯೊಂದು ಬಳಲುತ್ತಿರುವಾಗ ಸರ್ಪವೊಂದು ತನ್ನ ಹೆಡೆ ಎತ್ತಿ ಅದಕ್ಕೆ ರಕ್ಷೆ ನೀಡುತ್ತದೆ. ಸನಾತನ ಧರ್ಮ ಸ್ಥಾಪನೆಗಾಗಿ ಮೊದಲನೇ ಪೀಠಕ್ಕೆ ಶೃಂಗೇರಿ ಅತ್ಯುತ್ತಮ ಸ್ಥಳವೆಂದು ಭಾವಿಸಿದರು. ಮಾತೆ ಶಾರದಾಂಬೆಯನ್ನು ಇಲ್ಲಿ ಬಂದು ನೆಲೆಸುವಂತೆ ಪ್ರಾರ್ಥಿಸಿಕೊಂಡರು. ಶ್ರೀಚಕ್ರವನ್ನು ರಚಿಸಿ ಇಲ್ಲಿ ಪ್ರತಿಷ್ಠಾಪನೆ ಮಾಡಿದರು. ಗಿರಿಯೆಂಬ ಬಾಲಕನನ್ನು ಅವನ ಶ್ರದ್ಧಾ ಭಕ್ತಿಗೆ ಮೆಚ್ಚಿ ಶಂಕರಾಚಾರ್ಯರು ಅವನಿಗೆ ಸನ್ಯಾಸ ದೀಕ್ಷೆಯನ್ನಿತ್ತು 4 ನೇ ಶಿಷ್ಯನನ್ನಾಗಿ ಸ್ವೀಕರಿಸಿ ತೋಟಕಾಚಾರ್ಯ ಎಂಬ ನಾಮಕರಣ ಮಾಡಿದರು. ಹಿರಿಯ ಶಿಷ್ಯ ಸುರೇಶಾಚಾರ್ಯನನ್ನು ಪೀಠಾಧಿಪತಿಗಳಾಗಿ ನೇಮಿಸಿದರು. ಶ್ರೀ ಚಂದ್ರಮೌಳೀಶ್ವರನ ಸ್ಫಟಿಕಲಿಂಗ ಹಾಗೂ ರತ್ನಗರ್ಭ ಗಣಪತಿ ವಿಗ್ರಹಗಳನ್ನು ಕೊಟ್ಟು ವಿಧ್ಯುಕ್ತವಾಗಿ ಪೂಜೆಯನ್ನು ನಡೆಸಿಕೊಂಡು ಬರುವಂತೆ ಆದೇಶಿಸಿದರು.

ಆರ್ಯಾಂಬೆಗೆ ನೀಡಿದ ವಚನದಂತೆ ಮೃತ್ಯುಶೈಯ್ಯೆಯಲ್ಲಿ ಮಲಗಿರುವ ಅವಳನ್ನು ಕಾಣಲು ಶಂಕರಾಚಾರ್ಯರು ಕಾಲಟಿಗೆ ಆಗಮಿಸಿದರು. ಆರ್ಯಾಂಬೆ ಶಂಕರನ ಹಸ್ತಗಳಲ್ಲಿ ತನ್ನ ಹಸ್ತವಿರಿಸಿ ಪ್ರಾಣ ತ್ಯಾಗ ಮಾಡುತ್ತಾಳೆ. ತಾನು ಸನ್ಯಾಸಿಯಾದ್ದರಿಂದ ತಾಯಿಯ ದೇಹವನ್ನು ಬಂಧುಗಳು ದಹನ ಮಾಡಲು

(4ನೇ ಪುಟಕ್ಕೆ...)




ಎಮ್. ದೇವಾನಂದ್ ಭಟ್ Cell : 9845644556

ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)

ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

Buying and selling shares as easy as checking your emails

Sharekhan Online Trading Account Features:

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

## ಭಗವಾನ್ ಶ್ರೀ ಶಂಕರಾಚಾರ್ಯರು

■...3ನೇ ಪುಟದಿಂದ

ಸಹಕರಿಸಬೇಕೆಂದು ಕೇಳಿಕೊಂಡರು. ಅವರು ಯಾರೂ ಒಪ್ಪಲಿಲ್ಲ. ಕರ್ತವ್ಯಬಾಹಿರರಾದ್ದರಿಂದ ಅವರ ಮನೆಗಳಲ್ಲಿ ಯಾರೂ ಆದರಾತಿಥ್ಯವನ್ನು ಸ್ವೀಕರಿಸದಂತಾಗಲಿ ಎಂದು ಶಂಕರಾಚಾರ್ಯರು ನುಡಿದರು. ಬಾಳೆಯ ಗಿಡಗಳ ಕಾಂಡಗಳಿಂದ ಅಂಗೈಯಲ್ಲಿ ಸೃಷ್ಟಿಸಿದ ಅಗ್ನಿಯ ಮೂಲಕ ತಾಯಿಯ ದೇಹವನ್ನು ದಹಿಸಿಯೇ ಬಿಟ್ಟರು.

ಶಂಕರಾಚಾರ್ಯರು ತನ್ನ ಶಿಷ್ಯರೊಡಗೂಡಿ ಕಾಂಚೀಪುರ, ಅಯೋಧ್ಯೆ, ಮಥುರೆ, ಆವಂತಿಕ, ಪುರಿ, ದ್ವಾರಕೆಗಳನ್ನು ಸಂದರ್ಶಿಸುತ್ತಾರೆ. ದಕ್ಷಿಣದಲ್ಲಿ ಸುಬ್ರಹ್ಮಣ್ಯ, ರಾಮೇಶ್ವರ ಮೊದಲಾದ ಕ್ಷೇತ್ರ ದರ್ಶನ ಮಾಡುತ್ತಾರೆ, ಸಮಗ್ರ ಭರತಖಂಡವನ್ನು ಮೂರು ಬಾರಿ ಸಂಚರಿಸಿ ಸನಾತನಧರ್ಮ ಪ್ರಚಾರ ಮಾಡುತ್ತಾ ಬದರಿಕಾಶ್ರಮಕ್ಕೆ ಬರುತ್ತಾರೆ. ಭಾರತಾದ್ಯಂತೆ ಅದ್ವೈತ ಮತ ಪ್ರಚಾರ ಮಾಡಿದರು. ನಾಲ್ಕು ದಿಕ್ಕುಗಳಲ್ಲಿ ಪೀಠಗಳನ್ನು ಸ್ಥಾಪಿಸಿ ಅವುಗಳ ನಿರ್ವಹಣೆಗಾಗಿ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಾಧಿಪತಿಯಾಗಿ ಸುರೇಶಾಚಾರ್ಯರನ್ನೂ, ಪೂರ್ವದಲ್ಲಿರುವ ಪುರಿಯಲ್ಲಿ ಹಸ್ತಮಲಕಾಚಾರ್ಯರನ್ನೂ, ಪಶ್ಚಿಮದ ದ್ವಾರಕೆಯಲ್ಲಿ ತೋಟಕಾಚಾರ್ಯರನ್ನೂ, ಉತ್ತರದ ಬದರೀನಾಥದಲ್ಲಿ ಪದ್ಮಪಾದರನ್ನೂ ಪೀಠಾಧಿಪತಿಗಳಾಗಿ ನೇಮಿಸಿದರು. ತನ್ನ ಪರಮಗುರುಗಳಾದ ಗೌಡಪಾದರನ್ನು ಸಂದರ್ಶಿಸಲು ಬದರಿಗೆ ಬರುತ್ತಾರೆ.

ಸರ್ವಜ್ಞ ಪೀಠವನ್ನು ಅಲಂಕರಿಸಲು ಕಾಶ್ಮೀರಕ್ಕೆ ಪ್ರಸ್ಥಾನ ಮಾಡಿ ಅಲ್ಲಿ ಬೆಟ್ಟವೊಂದರಲ್ಲಿ ಶ್ರೀ ಶಾರದಾ ನೆಲೆಸಿದ ಸ್ಥಳಕ್ಕೆ ಬಂದು ಅವಳನ್ನು ಸ್ತುತಿಸುತ್ತಾರೆ.

***ಶ್ರುತಿ ನಮಸ್ತೆ ಶಾರದಾದೇವಿ ಕಾಶ್ಮೀರಪುರವಾಸಿನಿ ತ್ವಾಮಹಂ ಪ್ರಾರ್ಥಯೇ ವಾಣಿ ಸರ್ವಜ್ಞಸ್ವದೀಚ ದೇಯಿಮೆ।***

ಶಾರದೆಯ ಅನುಮತಿ ದೊರೆತಾಗ ಶಂಕರಾಚಾರ್ಯರು ಸ್ವರ್ಣಪೀಠವನ್ನೇರುತ್ತಾರೆ. ಆಗ ದೇವತೆಗಳು ಆಕಾಶದಿಂದ ಪುಷ್ಪವೃಷ್ಟಿಗೈಯುತ್ತಾರೆ. 'ಜಗದ್ಗುರು ಶಂಕರ ಭಗವತ್ಪಾದರಿಗೆ ಜಯವಾಗಲಿ. ಸರ್ವಜ್ಞ ಮೂರ್ತಿಗೆ ಜಯವಾಗಲಿ' ಎಂದು ಜಯಘೋಷಗೈಯುತ್ತಾರೆ.

ಅಲ್ಲಿಂದ ಜಗದ್ಗುರು ಶಂಕರಾಚಾರ್ಯರು ಕೇದಾರನಾಥಕ್ಕೆ ತೆರಳಿ ಅಲ್ಲಿನ ಜ್ಯೋತಿರ್ಲಿಂಗ ಕೇದಾರನಾಥೇಶ್ವರನ ದರ್ಶನ ಗೈದು ಸ್ತುತಿಸುತ್ತಾರೆ. ತನ್ನ 32 ವರುಷಗಳ ಸಾರ್ಥಕ ಜೀವನಕ್ಕೆ ಮಂಗಲ ಹಾಡುತ್ತಾ ಕೇದಾರದ ಪರ್ವತವೊಂದರಲ್ಲಿರುವ ದತ್ತಾತ್ರೇಯ ಗುಹೆಯನ್ನು ಪ್ರವೇಶಿಸಿ ಶಿವನಲ್ಲಿ ಐಕ್ಯರಾಗುತ್ತಾರೆ.

ವಾಹನ ಸೌಲಭ್ಯಗಳು, ಪ್ರಚಾರಸಾಧನಗಳು ಇಲ್ಲದಿದ್ದ ಆ ಕಾಲದಲ್ಲಿ ಶಂಕರಾಚಾರ್ಯರು ಭಾರತದ ಉದ್ದಗಲಕ್ಕೂ ಪಾದಚಾರಿಗಳಾಗಿ ಸಂಚರಿಸಿ ಭಾರತವನ್ನು ಆಧ್ಯಾತ್ಮಿಕವಾಗಿ ಒಂದುಗೂಡಿಸಿದರು. ಅದ್ವೈತ ತತ್ವ ಚಿಂತನೆ, ಧರ್ಮಪ್ರಚಾರ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಸೂಕ್ತವಾದ ಮಾರ್ಗದರ್ಶನ ಮಾಡಿದರು. ಶಂಕರಾಚಾರ್ಯರಿಂದ ಗದ್ಯಪದ್ಯಗಳಲ್ಲಿ ಸರಳ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ಸೌರಭ ಕಾಣಿಸಿಕೊಳ್ಳುತ್ತದೆ. ಭಜಗೋವಿಂದಂ, ಶಿವಮಾನಸ ಪೂಜಾ, ಶ್ರೀ ಲಲಿತ ಪಂಚಕಮ್, ಶಿವಷಡಕ್ಷರ ಸ್ತೋತ್ರಮ್, ಶಿವಾಪರಾಧ ಕ್ಷಮಾಪಣಾ ಸ್ತೋತ್ರಮ್, ಶ್ರೀ ಅನ್ನಪೂರ್ಣಾ ಸ್ತೋತ್ರಮ್, ಶ್ರೀ ಶಿವಪಂಚಾಕ್ಷರ ಸ್ತೋತ್ರಮ್, ಲಿಂಗಾಷ್ಟಕಮ್, ಸೂರ್ಯಾಷ್ಟಕಮ್, ಶಿವಪ್ರಾತಃ ಸ್ಮರಣಮ್, ಶ್ರೀ ಕನಕಧಾರಾ ಸ್ತೋತ್ರಮ್, ಶ್ರೀ ಶಾರದಾ ಭುಜಂಗ ಸ್ತೋತ್ರಮ್ ಮೊದಲಾದ ಅನೇಕ ಅಮರವಾದ ಮತ್ತು ಮಧುರವಾದ ಕೃತಿಗಳನ್ನು ರಚಿಸಿ ಕೀರ್ತಿವಂತರಾದರು.

(ಹಿರಿಯರಾದ ಅದ್ಯಪಾಡಿ ಪದ್ಮನಾಭ ಯಶವಂತ ಶರ್ಮ – ಅಪಯಶ, ಬೆಂಗಳೂರು ಇವರು ಭಾರತೀಯ ಜೀವವಿಮಾ ನಿಗಮದಲ್ಲಿ ಜೀವ ವಿಮಾ ಅಭಿವೃದ್ಧಿ ಅಧಿಕಾರಿಗಳಾಗಿದ್ದರು. ಇವರ ಕೃತಿ ಶ್ರೀ ಶಂಕರ ಭಗವತ್ಪಾದ ಚರಿತಾಮೃತಮ್. ಸುಲಲಿತ ಚೌಪದಿಯಾಗಿದ್ದು ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತದೆ. ಇವರು ಬಿ. ಬಾಲಚಂದ್ರ ರಾವ್ ಇವರ ಭಾವ. ಬಾಲಚಂದ್ರರಾವ್ ಯಶವಂತ ಶರ್ಮರು ಬರೆದ ಶ್ರೀ ಶಂಕರ ಭಗವತ್ಪಾದ ಚರಿತಾಮೃತಮ್, ಶ್ರೀ ಆದಿಶಂಕರಾಚಾರ್ಯರ ಕಿರುಲೇಖನವನ್ನು ಬರೆಯಲು ತುಂಬಾ ಪ್ರೇರಣೆ ನೀಡಿತು. ಶ್ರೀ ಆದಿಶಂಕರಾಚಾರ್ಯ ಕನ್ನಡ ನಾಟಕವನ್ನು ರಚಿಸಿದ ಇವರು ಪುರಂದರದಾಸರು, ಕನಕದಾಸರು, ಒಂದಾಗಿ ಬಾಳೋಣ, ಪರೋಪಕಾರ, ತುಳಸಿ ಮಹಾತ್ಮ್ಯ ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. ಅಪಯಶ ಇವರ ಕಾವ್ಯ ಶ್ರೀ ಶಂಕರ ಭಗವತ್ಪಾದ ಚರಿತಾಮೃತಮ್ ಮತ್ತು ಬಿ.ಬಾಲಚಂದ್ರರಾವ್ ಇವರ ನಾಟಕ ಶ್ರೀ ಆದಿಶಂಕರಾಚಾರ್ಯ ನನಗೆ ಈ ಕಿರುಲೇಖನವನ್ನು ಬರೆಯಲು ಹುಮ್ಮಸ್ಸು ನೀಡಿತು. ಇದಕ್ಕೆ ಇವರಿಬ್ಬರ ಕೃತಿಯೇ ಆಧಾರವಾಗಿದೆ. ಇವರಿಗೆ ಕೃತಜ್ಞತೆಗಳು 'ಗೋಕುಲ'ದ ಸಮರ್ಥ, ಸೃಜನಶೀಲಾ ಬಿ.ಬಾಲಚಂದ್ರರಾವ್ ಇವರು ಇತ್ತೀಚೆಗೆ ನಮ್ಮನ್ನ ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ.

## ಬ್ರಾಹ್ಮಣರ ಒಗ್ಗಟ್ಟು ಇಂದಿನ ಅವಶ್ಯಕತೆ – ಶ್ರೀ ಸಚ್ಚಿದಾನಂದ ಮೂರ್ತಿ



ತ್ರಿಮತಸ್ಥ ಬ್ರಾಹ್ಮಣರು ಒಗ್ಗಟ್ಟಾಗಿದ್ದು ಸರಕಾರದ ವಿವಿಧ ಯೋಜನೆಗಳ ಸದುಪಯೋಗ ಪಡೆಯಬೇಕು ಮತ್ತು ತಮ್ಮ ಹಕ್ಕಿನ ಅವಶ್ಯಕತೆಗಳಿಗೆ ಸರಕಾರದ ಗಮನ ಸೆಳೆಯಲು ಸಫಲರಾಗಬೇಕು ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಸಚ್ಚಿದಾನಂದ ಮೂರ್ತಿಗಳು ಬ್ರಾಹ್ಮಣರಿಗೆ ಕರೆ ನೀಡಿದರು. ಶ್ರೀ ಸುಬ್ರಹ್ಮಣ್ಯ ಸಭಾದ ಅಪೂರ್ವ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಸ್ಥಾನಿಕ ಬ್ರಾಹ್ಮಣ ಸಮಾಜವು ಸಂಖ್ಯೆಯಲ್ಲಿ ಚಿಕ್ಕದಾಗಿದ್ದರೂ ಕಳೆದ 112 ವರ್ಷಗಳಿಂದ ಬ್ರಾಹ್ಮಣ ಸಮಾಜದ 140ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅತೀ ಕನಿಷ್ಟ ಬೆಲೆಯಲ್ಲಿ ವಸತಿ ವ್ಯವಸ್ಥೆಯನ್ನು ಮಾಡುತ್ತಿದ್ದು ಇದೀಗ ಪುತ್ತೂರಿನ "ಶಿವ ಸದನ"ದಲ್ಲಿ ಹಿರಿಯ ನಾಗರಿಕರ ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಸತಿ ನಿಲಯವನ್ನು ಸ್ಥಾಪಿಸಿದೆ. ಅಷ್ಟೇ ಅಲ್ಲದೆ ಸುಬ್ರಹ್ಮಣ್ಯ ಸಹಕಾರ ಸಂಘವು 8 ಶಾಖೆಗಳ ಮೂಲಕ ಸರ್ವರ ಅವಶ್ಯಕತೆಗಳನ್ನು ಪೂರೈಸುವ ಕಾರ್ಯವನ್ನು ಮಾಡುತ್ತಿದೆ. ನಮ್ಮ ಮಂಡಳಿಯ ವತಿಯಿಂದ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಾ ಬ್ರಾಹ್ಮಣರ ಏಳಿಗೆಗೆ ನಾವೆಲ್ಲರೂ ಪ್ರಯತ್ನಿಸೋಣ ಎಂದು ನುಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆಯವರು ವಹಿಸಿಕೊಂಡಿದ್ದರು. ಮಂಗಳೂರು ಮಹಾನಗರ ಪಾಲಿಕೆಯ ಉಪಮೇಯರ್ ಶ್ರೀಮತಿ ಸುಮಂಗಲಾ ರಾವ್ ಮತ್ತು ಎಸ್.ಎಸ್.ಎಲ್.ಸಿಯಲ್ಲಿ ದ್ವಿತೀಯ ರ್‍ಯಾಂಕ್ ವಿಜೇತೆ ಕುಮಾರಿ ನಿಧಿ ರಾವ್‌ರವರನ್ನು ಸನ್ಮಾನಿಸಲಾಯಿತು. ಶಾರದಾಂಭಾ ಭಜನಾ ಮಂಡಳಿಯವರ ಭಜನಾ ಕಾರ್ಯಕ್ರಮದ ಬಳಿಕ ಪ್ರಾರ್ಥನೆಯನ್ನು ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಸ್ನೇಹಲತಾ ದಿವಾಕರ, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ನಡೆಸಿದರು ಬ್ರಹ್ಮಶ್ರೀ ಪ್ರತಾಪ್ ಶರ್ಮರು ವೇದಘೋಷ್ ಪಠಿಸಿದರೆ, ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಆಶೀರ್ವಚನ ನೀಡಿದರು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಸರ್ವರನ್ನೂ ಸ್ವಾಗತಿಸಿದರು. ವೇದಿಕೆಯಲ್ಲಿ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ, ಉಪಮೇಯರ್ ಶ್ರೀಮತಿ ಸುಮಂಗಲಾ ರಾವ್, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಶ್ರೀ ಶಿವರಾಂ ಉಡುಪ, ಶ್ರೀ ಪವನ ಕುಮಾರ್ ಆಸೀನರಾದ್ದರು. ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ವಲ್ಲಿ ಜ್ಞಾನೇಶ್ ಸನ್ಮಾನಿತರ ಪರಿಚಯ ಮಾಡಿದರು. ಶ್ರೀ ಸಭಾದ ಉಪಾಧ್ಯಕ್ಷರಾದ ಡಾ. ಎ.ಪಿ ಕೃಷ್ಣ ಧನ್ಯವಾದ ನೀಡಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು.

## ಶ್ರೀ ದಿನಮಣಿ ಶಾಸ್ತ್ರಿಯವರಿಗೆ ಸನ್ಮಾನ



ಕಳೆದ ಇಪ್ಪತ್ತೇಳು ವರುಷಗಳಿಂದ ಬ್ರಹ್ಮಾವರದ ಸರಕಾರಿ ಪ.ಪೂ. ಕಾಲೇಜಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ, ಹವ್ಯಾಸಿ ಬರಹ ಮತ್ತು ಛಾಯಾಚಿತ್ರಗಾರರಾಗಿ ಸೇವಾ ನಿವೃತ್ತಿ ಹೊಂದಿದ ಶ್ರೀ ಕೆ. ದಿನಮಣಿ ಶಾಸ್ತ್ರೀ ಅವರನ್ನು ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ಶ್ರೀಯುತರ ಪತ್ನಿ ಗಾಯತ್ರಿ ಶಾಸ್ತ್ರಿ, ಶ್ರೀ ಕೆ. ಅಶೋಕ ಕಾಮತ್, ಡೆಯಟ್ ಉಪಪ್ರಾಂಶುಪಾಲರು, ಶ್ರೀ ಕೆ.ಶೇಖರ ಹೆಗ್ಡೆ, ನಿವೃತ್ತ ಶಿಕ್ಷಕರು, ಶ್ರೀ ಬಿ.ಟಿ. ನಾಯಕ್, ಉಪಪ್ರಾಂಶುಪಾಲರು, ಶ್ರೀಮತಿ ಉಷಾಬಾಯಿ, ನಿವೃತ್ತ ಶಿಕ್ಷಕಿ, ರೊಟೇರಿಯನ್ ಶ್ರೀ ಭಾಸ್ಕರ ರೈ, ಪಿ.ಟಿ.ಎ. ಅಧ್ಯಕ್ಷ ಶ್ರೀ ಸದಾನಂದ ವಾರಂಬಳ್ಳಿ ಮತ್ತು ಉಪಾಧ್ಯಕ್ಷ ಶ್ರೀ ಸತೀಶ್ ಕೋಟ್ಯಾನ್, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶ್ರೀಮತಿ ಸುಶೀಲಾ ಕೆ. ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ಸುಶೀಲಾ ಎಂ. ವಂದನಾರ್ಪಣೆಗೈದರು.

## ಬಾರಕೂರು ಸಂಘದ ಮಹಾಸಭೆ



ದಿನಾಂಕ 03–04–2021ರಂದು ಬ್ರಹ್ಮಾವರದ ಸಿಟಿಸೆಂಟರಿನ ಸಿಂಧೂರ ಸಭಾಂಗಣದಲ್ಲಿ ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾದ ವಿಶೇಷ ಮಹಾಸಭೆ ನೆರವೇರಿತು. ಬಾರಕೂರು ಮಂದಾರ್ತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿದ್ದ ಈ ಸಂಘ ಈಗ ಬ್ರಹ್ಮಾವರ ತಾಲೂಕಿಗೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡ ಕಾರಣ ಅದರ ಹೆಸರನ್ನು ಬದಲಾಯಿಸುವ ನಿರ್ಣಯವನ್ನು ಮಾಡುವ ಉದ್ದೇಶದಿಂದ ಈ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಡಾ.ರವೀಂದ್ರನಾಥ ರಾವ್ ಬ್ರಹ್ಮಾವರ ಇವರು ಆಗಮಿಸಿ ದೀಪ ಬೆಳಗಿಸಿ ಉದ್ಘಾಟಿಸಿದರು. ಬ್ರಹ್ಮಾವರ ತಾಲೂಕು ವ್ಯಾಪ್ತಿಯಲ್ಲಿ ನಡೆಯುವ ಈ ಸಂಘದ ಚಟುವಟಿಕೆಗಳಿಂದ ಹೆಚ್ಚಿನ ಸ್ಥಾನಿಕ ಬಾಂಧವರಿಗೆ ಪ್ರಯೋಜನವಾಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಇಂತಹಾ ಸಂಘ ಸಂಸ್ಥೆಗಳ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿಕೊಂಡರೆ ಸಮಾಜದ ಏಳಿಗೆ ನಿಶ್ಚಿತ ಎಂದರು. ಸಂಘದ ಹೆಸರನ್ನು ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ ಬ್ರಹ್ಮಾವರ ತಾಲೂಕು ಎಂದು ಬದಲಿಸಿ ನಿರ್ಣಯ ಮಾಡಲಾಯಿತು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಬ್ರಹ್ಮಾವರ ವ್ಯಾಪ್ತಿಯ ಸದಸ್ಯರನ್ನು ಸೇರ್ಪಡೆಗೊಳಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸುವ ಕಾರ್ಯಕ್ರಮ ನೆರವೇರಿತು. ಹಿರಿಯ ಯಕ್ಷಗಾನ ಕಲಾವಿದರಾದ ಜಂಬೂರು ರಾಮಚಂದ್ರ ಶಾನುಭಾಗ್, ಗೇರು ಬೆಳೆಯ ಅತ್ಯುತ್ತಮ ಬೆಳೆ ಮತ್ತು ನಿರ್ವಹಣಾ ಪ್ರಶಸ್ತಿ ಪಡೆದ ಕೆ ವಿನೋದ ಕುಮಾರ್ ರಾವ್ ಮಂದಾರ್ತಿ, ಶಿಕ್ಷಣ ಜ್ಞಾನ ಕವಚ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಸುಕನ್ಯಾ, ಮತ್ತು ಪ್ರತಿವರ್ಷ ಕರ್ನಾಟಕದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ನೀಡುವ ರಾಜ್ಯ ಶೌರ್ಯ ಪ್ರಶಸ್ತಿಯನ್ನು ಈ ವರ್ಷ ಮಹಿಳಾ ದಿನಾಚರಣೆಯ ದಿನ ನೀಡಲಾಗಿದ್ದು, ಮಾನ್ಯ ಮುಖ್ಯಮಂತ್ರಿಗಳಿಂದ" ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ"ಯನ್ನು ಪಡೆದ ಕುಮಾರಿ ನಮನಾ.ಬಿ.ಕೆ. ಇವರನ್ನು ಶಾಲು ಹಾರ ಹಾಕಿ ಸ್ಮರಣಿಕೆ ಸನ್ಮಾನ ಪತ್ರ ನೀಡಿ ಗೌರವಿಸಲಾಯಿತು. ಸನ್ಮಾನಿತರು ಕೃತಜ್ಞತೆ ಸಲ್ಲಿಸಿದರು. ಪ್ರದಾತೃ ಹಾಗೂ ಪೋಷಕ ಸದಸ್ಯರಾದವರನ್ನು ಗುರುತಿಸಲಾಯಿತು. ಸ್ಫೂರ್ತಿ ಮಂದಾರ್ತಿ, ಗಣೇಶ್ ರಾವ್ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಗೌರಿ ಎಸ್.ರಾವ್, ಪಿ. ಜಯರಾಮ ರಾವ್, ಗಿರೀಶ್ ಮಂದಾರ್ತಿ, ಗಣೇಶ್ ರಾವ್ ಮಸ್ಕಿಬೈಲ್ ಸನ್ಮಾನ ಪತ್ರವನ್ನು ವಾಚಿಸಿದರು. ಚಾಮರಾಜ್ ಮಂದಾರ್ತಿ ಸಂಘದ ಉದ್ದೇಶಗಳನ್ನು ತಿಳಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯರ ಪಟ್ಟಿಯನ್ನು ನೀಲಕಂಠ ರಾವ್ ವಾಚಿಸಿದರು. ಪ್ರಸ್ತಾವಿಕವಾಗಿ ಸಂಘದ ಸಂಚಾಲಕರಾದ ಶಂಭು ಶಂಕರ ರಾವ್ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಮಂಜುನಾಥ ರಾವ್ ಕೋಟೆಕೇರಿ ವಹಿಸಿದ್ದರು.

ನಾಗರತ್ನ ಬಿ.ಹೆಬ್ಬಾರ್ ಪ್ರಾರ್ಥಿಸಿದರು. ಜತೆಕಾರ್ಯದರ್ಶಿ ರವೀಂದ್ರ ರಾವ್ ವಂದಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಸವಿತಾ ಎರ್ಮಾಳ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

*With Best Complimemts From*
**SRI M. SHAILESH RAO** Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**

## ವೃತ್ತಿಪರ ಕಲಿಕೆಯ ದೃಷ್ಟಿಕೋನ ಬದಲಾಗಬೇಕು : ಡಾ| ರವಿರಾಜ್ ಉಡುಪಿ

■...1ನೇ ಪುಟದಿಂದ

ಪುತ್ರಿ ಕಾರ್ಕಳದ ಜ್ಞಾನಸುಧಾ ಪಿ.ಯು ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಪ್ರಣಮ್ಯ ಭಂಡಿ 581/600 ಅಂಕ ಪಡೆದು ಪಿ.ಯು.ಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ ಇರುವ ಉದಯಚಂದ್ರ ಪ್ರತಿಭಾ ಪುರಸ್ಕಾರವನ್ನು ಪಡೆದರು.

**ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರ :** ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಸ್ಥಾಪಕರಲ್ಲಿ ಒಬ್ಬರಾಗಿ, ಸ್ಥಾಪಕ ಅಧ್ಯಕ್ಷರಾಗಿ ಮುನ್ನಡೆಸಿ ಸಂಘಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟ ದಿ| ಅಂಬಲಪಾಡಿ ಕೃಷ್ಣರಾವ್ ಸ್ಮರಣಾರ್ಥ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ರ್‍ಯಾಂಕ್ ಬಂದ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ನೀಡುವ "ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರ"ವನ್ನು ಈ ವರ್ಷ ಈ ಕೆಳಗಿನಂತೆ ವಿತರಿಸಲಾಯಿತು.

1) ಶ್ರೀ ಕೃಷ್ಣಮೂರ್ತಿ ರಾವ್ ಬ್ರಹ್ಮಾವರ ಹಾಗೂ ಶ್ರೀಮತಿ ಸುಮಂಗಲಾ ಇವರ ಪುತ್ರಿ ಬೆಂಗಳೂರಿನ ಆಕ್ಸ್‌ಫರ್ಡ್ ಡೆಂಟಲ್ ಕಾಲೇಜಿನ ಬಿ.ಡಿ.ಎಸ್ ವಿದ್ಯಾರ್ಥಿನಿ ಡಾ| ಗೌತಮಿ ಕೆ. ರಾಜೀವ್‌ಗಾಂಧಿ ಯುನಿವರ್ಸಿಟಿ ಮಟ್ಟದಲ್ಲಿ 3 ಚಿನ್ನದ ಪದಕಗಳೊಂದಿಗೆ ರಾಜ್ಯಕ್ಕೆ 2ನೇ ರ್‍ಯಾಂಕ್ ಪಡೆದು ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರವನ್ನು ಪಡೆದರು. 2) ಶ್ರೀ ಸದಾಶಿವರಾವ್ ಬೊಕ್ಕಸ ಹಾಗೂ ಶ್ರೀಮತಿ ಬಿ.ಪ್ರೀತಿ ರಾವ್ ಮೂಡಬಿದರೆ ಇವರ ಪುತ್ರಿ ಆಳ್ವಾಸ್ ಆಯುರ್ವೇದ ಮೆಡಿಕಲ್ ಕಾಲೇಜಿನ ಬಿ.ಎ.ಎಮ್.ಎಸ್ ವಿದ್ಯಾರ್ಥಿನಿ ಡಾ| ದೀಪಿ ಬಿ.ರಾವ್ ರಾಜೀವ್ ಗಾಂಧಿ ಯುನಿವರ್ಸಿಟಿ ಮಟ್ಟದಲ್ಲಿ ರಾಜ್ಯಕ್ಕೆ 4ನೇ ರ್‍ಯಾಂಕ್ ಪಡೆದು ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರವನ್ನು ಪಡೆದರು. 3) ಶ್ರೀ ಹೆರ್ಗ ಶ್ರೀನಿವಾಸ ರಾವ್ ಹಾಗೂ ಶ್ರೀಮತಿ ಆಶಾಲತಾ ರಾವ್ ಪರ್ಕಳ, ಉಡುಪಿ ಇವರ ಪುತ್ರಿ ಉದ್ಯಾವರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜಿನ ಎಮ್.ಡಿ (ಆಯುರ್ವೇದ ಸ್ನಾತಕೋತ್ತರ) ವಿದ್ಯಾರ್ಥಿನಿ ಡಾ| ಚೈತ್ರಾ ರಾಜೀವ್ ಗಾಂಧಿ ಯುನಿವರ್ಸಿಟಿ ಮಟ್ಟದಲ್ಲಿ ರಾಜ್ಯಕ್ಕೆ 10ನೇ ರ್‍ಯಾಂಕ್ ಪಡೆದು ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರವನ್ನು ಪಡೆದರು. 4) ಶ್ರೀ ರಮೇಶ್ ರಾವ್ ಹಾಗೂ ಶ್ರೀಮತಿ ಸಂಗೀತಾ ಕುಕ್ಕಿಕಟ್ಟೆ ಉಡುಪಿ ಇವರ ಪುತ್ರಿ ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ದಂತ ವಿಜ್ಞಾನ ಕಾಲೇಜು ಇಲ್ಲಿನ ಎಮ್.ಡಿ.ಎಸ್ (ಸ್ನಾತಕೋತ್ತರ) ವಿದ್ಯಾರ್ಥಿನಿ ಡಾ| ಪಲ್ಲವಿ ರಾಜೀವ್ ಗಾಂಧಿ ಯುನಿವರ್ಸಿಟಿ ಮಟ್ಟದಲ್ಲಿ ರಾಜ್ಯಕ್ಕೆ 8ನೇ ರ್‍ಯಾಂಕ್ ಪಡೆದು ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರವನ್ನು ಪಡೆದರು. ಈ ಎಲ್ಲಾ ಏಳೂ ಪ್ರಶಸ್ತಿ ಪುರಸ್ಕಾರಗಳನ್ನು ಕೇವಲ ಹೆಣ್ಣು ಮಕ್ಕಳೇ ತಮ್ಮದಾಗಿಸಿಕೊಂಡಿದ್ದು ಕಲಿಕೆಯಲ್ಲಿ ಹುಡುಗಿಯರೇ ಮೇಲುಗೈ ಎಂಬುದನ್ನು ಮತ್ತೊಮ್ಮೆ ಸಾಧಿಸಿದಂತಾಗಿದೆ. ಈಬಗ್ಗೆ ಗಂಡು ಹುಡುಗರು ಬಹಳಷ್ಟು ಯೋಚಿಸಬೇಕಾದ ಅನಿವಾರ್ಯತೆ ಇದೆ.

**ಹಿಮಾಂಶು ಸ್ಮಾರಕ ದತ್ತಿ ನಿಧಿ ಸ್ಥಾಪನೆ :** ಇದೇ ಸಂದರ್ಭದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದ ಖ್ಯಾತ ಶಿಶುತಜ್ಞ ಡಾ| ರವಿರಾಜ್, ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಉಡುಪಿ ಇದಕ್ಕೆ ನೀಡಿದ ರೂ. 1 ಲಕ್ಷವನ್ನು ಬ್ಯಾಂಕ್‌ನಲ್ಲಿ ನಿರಖು ಠೇವಣಿಯಾಗಿ ಇರಿಸಿದ್ದು, ಅದರ ಬಡ್ಡಿಯನ್ನು ಮುಂದಿನ ವರ್ಷದಿಂದ ಅವರ ದಿವಂಗತ ಪುತ್ರನ ಸ್ಮರಣೆಯಲ್ಲಿ "ಹಿಮಾಂಶು ಸ್ಮಾರಕ ದತ್ತಿ ನಿಧಿ ವಿದ್ಯಾರ್ಥಿವೇತನ"ವಾಗಿ ವಿತರಿಸುವುದೆಂದು ಘೋಷಿಸಲಾಯಿತು. ಮುಂದೆಯೂ ಈ ನಿಧಿಗೆ ಹೆಚ್ಚಿನ ನಗದನ್ನು ನೀಡುವುದಾಗಿ ಡಾ| ರವಿರಾಜ್ ಹೇಳಿದರು. ಡಾ|ರವಿರಾಜ್ ಅವರಿಗೆ ಸಂಘದ ವತಿಯಿಂದ ಶಾಲು ಸ್ಮರಣಿಕೆ ನೀಡಿ ಗೌರವಿಸಲಾಯಿತು.

**ಪ್ರಮಾಣ ಪತ್ರ ವಿತರಣೆ :** ಶಾರದಾ ಮಂಟಪದ ಭೋಜನ ಗೃಹ ನವೀಕರಣಕ್ಕೆ ರೂ. 30,000/– ಕಿಂತಲೂ ಮೇಲಟ್ಟು ದೇಣಿಗೆ ನೀಡಿದ ದಾನಿಗಳಿಗೆ ಕೃತಜ್ಞತಾ ಪೂರ್ವಕವಾಗಿ ಮುಂದಿನ ಹತ್ತು ವರ್ಷಗಳಲ್ಲಿ ತಾವು ಇಚ್ಚಿಸಿದ ಒಂದು ದಿನಕ್ಕೆ ಉಚಿತವಾಗಿ ಸಭಾಂಗಣವನ್ನು ಕಾದಿರಿಸು ವಂತೆ ಪ್ರಮಾಣಪತ್ರ ವಿತರಿಸಲಾಯಿತು.

ಸಂಘದ ಕೋಶಾಧಿಕಾರಿ ಶ್ರೀ ಜಯರಾಮ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಭಾರ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ ವಂದನಾರ್ಪಣೆ ಮಾಡಿದರು. ನಿರ್ದೇಶಕರಾದ ಕೃಷ್ಣಕುಮಾರ್ ಮಟ್ಟು ಕಾರ್ಯಕ್ರಮ ನಿರೂಪಣೆ ಮಾಡಿದರು.

**ಧಾರ್ಮಿಕ ಕಾರ್ಯಕ್ರಮ :** ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವದ ಅಂಗವಾಗಿ ಅನೇಕ ಧಾರ್ಮಿಕ ವಿಧಿಗಳು ನೆರವೇರಿತು. ಬೆಳಿಗ್ಗೆ 7.30ಕ್ಕೆ ಶ್ರೀ ಶಾರದಾ ದೇವಿಯ ಸನ್ನಿಧಾನದಲ್ಲಿ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಜೊತೆಯಾಗಿ ದೇವತಾ ಪ್ರಾರ್ಥನೆ ಮಾಡುವುದರೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭ ಗೊಂಡವು. ಧಾರ್ಮಿಕ ಕಾರ್ಯಕ್ರಮಕ್ಕೆ ಕರ್ತೃಗಳಾಗಿ ಉಡುಪಿ ಚಿಟ್ಪಾಡಿಯ ಶ್ರೀ ನಾರಾಯಣ ರಾವ್ ಹಾಗೂ ಶ್ರೀಮತಿ ವಿದ್ಯಾಲಕ್ಷ್ಮೀ ದಂಪತಿಗಳು ಸಹಕರಿಸಿದ್ದರು. ಶ್ರೀ ಪಾವಂಜೆ ಸುಬ್ರಹ್ಮಣ್ಯ ಉಪಾಧ್ಯಾಯ, ಶ್ರೀ ಭವಾನಿಶಂಕರ ಉಪಾಧ್ಯಾಯ, ಶ್ರೀ ಲಕ್ಷ್ಮೀನಾರಾಯಣ ಭಟ್, ಶ್ರೀ ಧರಣೀಶ್ ಭಟ್ ಮೊದಲಾದ ವೈದಿಕರಿಂದ ಗಣಹೋಮ , ಶ್ರೀಚಕ್ರ ಪೂಜೆ, ರುದ್ರಪಠಣ, ಮೊದಲಾದುವುಗಳು ನೆರವೇರಿತು. ಹಾಗೆಯೇ ಲಲಿತಾ ಪಾರಾಯಣ, ರುದ್ರ ಪಾರಾಯಣ, ಭಜನೆ ಸಂಪನ್ನಗೊಂಡಿತು.

ಕೊನೆಯಲ್ಲಿ ನಡೆದ ಅನ್ನಪ್ರಸಾದ ಭೋಜನದಲ್ಲಿ ಸುಮಾರು 200 ಜನ ಭಕ್ತ ಬಾಂಧವರು ಪಾಲ್ಗೊಂಡರು.

ವರದಿ : **ಕೃಷ್ಣಕುಮಾರ್ ರಾವ್, ಮಟ್ಟು**

## ನಂದಳಿಕೆ ತಂಡಕ್ಕೆ ಶ್ರೀ ಶಾರದಾ ಟ್ರೋಫಿ–2021

■...1ನೇ ಪುಟದಿಂದ

ವಿಜೇತರ ಪಟ್ಟಿ ವಾಚಿಸಿದರು. ಪ್ರಭಾರ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ ವಂದನಾರ್ಪಣೆ ಮಾಡಿದರು. ನಿರ್ದೇಶಕ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರೂಪಿಸಿದ್ದರು. ಫೈನಲ್ ಪಂದ್ಯಾಟದಲ್ಲಿ ಬೆಂಗಳೂರು ತಂಡವನ್ನು ಮಣಿಸಿದ ನಂದಳಿಕೆ–ಬಿ ತಂಡವು ಶ್ರೀ ಶಾರದಾ ಟ್ರೋಫಿಯನ್ನು ತನ್ನದಾಗಿಸಿ ಕೊಂಡಿತು.

**ಉಡುಪಿಯಲ್ಲಿ 29ನೇ ವರ್ಷದ ಶ್ರೀ ಶಾರದಾ ಟ್ರೋಫಿ :** ಸತತವಾಗಿ ಪ್ರತಿವರ್ಷ ನಡೆದುಕೊಂಡು ಬಂದ ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವು ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘಕ್ಕೆ ಹಿರಿಮೆಯನ್ನು ತಂದುಕೊಟ್ಟ ಕಾರ್ಯಕ್ರಮ ವಾಗಿದೆ. ಶಿಸ್ತುಬದ್ಧವಾಗಿ, ಅಚ್ಚುಕಟ್ಟಾಗಿ ನಡಸಿಕೊಂಡು 29ನೇ ವರ್ಷಕ್ಕೆ ತಲುಪಿದ ಈ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವು ಸಂಘದ ಅತ್ಯಂತ ಹಿರಿಮೆಯ ಸಂಘಟನಾತ್ಮಕ ಕಾರ್ಯಕ್ರಮವಾಗಿದೆ.

**ಉಪಾಹಾರ ಹಾಗೂ ನಿರಂತರ ಫ್ರಶ್‌ಲೈಮ್ ಸೋಡಾ :** ಆಗಮಿಸಿದ ಎಲ್ಲಾ ತಂಡಗಳ ಕ್ರೀಡಾಳುಗಳು ಮತ್ತು ಸಮಾಜ ಬಾಂಧವರು ಕ್ರೀಡಾಂಗಣದಲ್ಲಿಯೇ ಉಪಾಹಾರ ಸ್ವೀಕರಿಸಿದರು. ಬಿಸಿಬಿಸಿ ದೋಸೆಯನ್ನು ಕ್ರೀಡಾಂಗಣದಲ್ಲಿಯೇ ಸಿದ್ಧಪಡಿಸಿ ಒದಗಿಸಲಾಗಿತ್ತು. ಕ್ರೀಡಾಂಗಣ ದಲ್ಲಿ ಆಟಗಾರರಿಗೆ ನಿರಂತರ ಬೆಳಗ್ಗೆ ಮತ್ತು ಮಧ್ಯಾಹ್ನದ ನಂತರ ವಿವಿಧ ಫ್ಲೇವರ್‌ನ ಫ್ರೆಶ್‌ಲೈಮ್ ಸೋಡಾದ ವ್ಯವಸ್ಥೆ ಮಾಡಲಾಗಿತ್ತು. ಸುಡುಬಿಸಿಲಿನ ವಾತಾವರಣ ದಲ್ಲೂ ಈ ವ್ಯವಸ್ಥೆ ಮಾಡಿರುವುದರಿಂದ ಎಲ್ಲಾ ಆಟಗಾರರಿಗೆ ಉತ್ಸಾಹದಿಂದ ಭಾಗವಹಿಸಲು ಸಾಧ್ಯವಾಯಿತು.

**ಮಧ್ಯಾಹ್ನದ ಊಟ :** ಊಟಕ್ಕಾಗಿ ಪಂದ್ಯಗಳಿಗೆ ವಿಶ್ರಾಂತಿ ನೀಡಲಾಯಿತು. ಶಾರದಾ ಮಂಟಪದಲ್ಲಿ ಎಲ್ಲ ಆಟಗಾರರಿಗೆ ಶುಚಿ–ರುಚಿಯಾದ ಊಟ ಸಿದ್ಧಗೊಂಡಿತು. ಅಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗಾಗಿ ಏರ್ಪಡಿಸಲಾಗಿದ್ದ ಒಳಾಂಗಣ ಕ್ರೀಡೆಗಳೂ ಮುಗಿದಿದ್ದು, ಎಲ್ಲರೂ ಜೊತೆಯಾಗಿ ಊಟವನ್ನು ಸ್ವೀಕರಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ನಂದಳಿಕೆ–ಬಿ ತಂಡವನ್ನು ಕುಂದಾಪುರ ತಂಡವೂ, ಸ್ಥಾನಿಕ ರೋಯಲ್ ಬೆಳಂಗಡಿ ತಂಡವನ್ನು ಜೆಸಿಟಿ ಬೆಂಗಳೂರು ತಂಡವೂ ಎದುರಿಸಿದವು. ಒಂದು ಪಂದ್ಯದಲ್ಲಿ ನಂಳಿಕೆ–ಬಿ ತಂಡವು ವಿಜಯಿಯಾದರೆ ಇನ್ನೊಂದು ಪಂದ್ಯದಲ್ಲಿ ಜೆಸಿಟಿ ಬೆಂಗಳೂರು ತಂಡವು ಜಯಗಳಿಸಿತು.

**ಫೈನಲ್ ಕಾದಾಟ :** ಶ್ರೀ ಶಾರದಾ ಟ್ರೋಫಿ ಫೈನಲಿಸ್ಟ್‌ಗಳಾಗಿ ಹೊರಹೊಮ್ಮಿದ ನಂದಳಿಕೆ–ಬಿ ಹಾಗೂ ಜೆಸಿಟಿ ಬೆಂಗಳೂರು ತಂಡಗಳು ಸಂಜೆಯ ಇಳಿಹೊತ್ತಿನಲ್ಲಿ ತಮ್ಮನ್ನು ಸ್ಪರ್ಧೆಗೆ ಒಡ್ಡಿಕೊಂಡವು. ಟೋಸ್ ಗೆದ್ದ ನಂದಳಿಕೆ–ಬಿ ತಂಡ ಜೆಸಿಟಿ ಬೆಂಗಳೂರು ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿತು. ಜೆ.ಸಿ.ಟಿ ಬೆಂಗಳೂರು 6 ಓವರ್ ಗಳಲ್ಲಿ 43ರನ್ನು ಗಳಿಸಿ ನಂದಳಿಕೆ–ಬಿ ತಂಡಕ್ಕೆ ಗೆಲ್ಲಲು 44ರನ್ನುಗಳ ಸವಾಲನ್ನು ನೀಡಿತು. ಆದರೆ ನಂದಳಿಕೆ–ಬಿ ತಂಡವು ಕೇವಲ 3 ಓವರ್‌ಗಳಲ್ಲಿ 45ರನ್ನು ಗಳಿಸಿ ವಿಜಯದ ಗುರಿ ತಲುಪಿ ಶ್ರೀಶಾರದಾ ಟ್ರೋಫಿ– 2021ನ್ನು ತಮ್ಮದಾಗಿಸಿಕೊಂಡಿತು.

**ನಿರ್ಲಿಪ್ತ ತೀರ್ಪುಗಾರರು :** ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟಕ್ಕೆ ಪ್ರತಿ ವರ್ಷದಂತೆ ನಿರ್ಲಿಪ್ತ ಅಂಪೈರ್‌ಗಳು ಕಾರ್ಯನಿರ್ವಹಿಸಿದರು. ಮೂಳೂರು ಯು.ಬಿ.ಎಂ.ಸಿ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕ ಶ್ರೀ ಪ್ರವೀಣ್‌ಕುಮಾರ್, ಕುದಿ ವಿಷ್ಣುಮೂರ್ತಿ ಪ್ರೌಢ ಶಾಲಾ ದೈಹಿಕ ಶಿಕ್ಷಣ ಶಿಕ್ಷಕ ಶ್ರೀ ಉಮೇಶ್, ಮಣಿಪಾಲದ ಕಿರಣ್, ದಾಮೋದರ್, ಪ್ರಜ್ವಲ್, ಅಕ್ಷಯ್, ನಿಶ್ಚಿತ್, ಶ್ರೀಕಾಂತ್, ಅಕ್ಷಯ್, ಹುಸೇನ್ ಮೊದಲಾದವರು ನಿರ್ಲಿಪ್ತ ತೀರ್ಪುಗಾರ ರಾಗಿ ಸಹಕರಿಸಿದ್ದರು.

**ಹಿಂದಿನ ದಿನದ ಸಿದ್ಧತೆ :** ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟಕ್ಕೆ ಬಹಳಷ್ಟು ದಿನದ ತಯಾರಿಯನ್ನು ಮಾಡುವ ಮೂಲಕ ಅದು ಯಶಸ್ವಿಯಾಗಲು ಸಾಧ್ಯವಾಗಿದೆ. ಹಿಂದಿನ ದಿನವಂತೂ ಕ್ರೀಡಾಂಗಣದಲ್ಲಿ ಪಿಚ್ ತಯಾರಿ, ಸುಣ್ಣ ಹಾಕುವುದು. ಮೊದಲಾದ ಕೆಲಸಗಳು ಸಂಘಟಕರಿಗೆ ಸವಾಲೊಡ್ಡುವ ವಿಚಾರ ವಾಗಿದೆ. ಸತತ ಇಷ್ಟು ವರ್ಷಗಳಿಂದ ಸಾಂಗವಾಗಿ ನಡೆದುಕೊಂಡು ಬರುತ್ತಿದ್ದ ಈ ಕಾರ್ಯವು ಇತ್ತೀಚಿನ ಕೆಲವು ವರ್ಷ ಗಳಿಂದ ಕೇವಲ ಬೆರಳೆಣಿಕೆಯ ಜವಾಬ್ದಾರಿತ ವ್ಯಕ್ತಿಗಳಿಂದ ಮಾತ್ರ ನೆರವೇರುತ್ತಿದೆ. ಈ ವರ್ಷ ನಮ್ಮ ಹೊಸ ಚಿಗುರುಗಳಾದ ಅಭ್ಯುದಯ್, ವಿನೋದ್ ಕುಮಾರ್, ಆದರ್ಶ ರಾವ್, ಕು| ಅನನ್ಯ ಮೊದಲಾದ ವರು ಅತ್ಯುತ್ಸಾಹದಿಂದ ಪಾಲ್ಗೊಂಡು ಮಾಡಿರುವ ಕೆಲಸವನ್ನು ನೋಡಿದ ಸಂಘಟಕರಿಗೆ ಮುಂದಿನ ದಿನಗಳು ಇದೇ ರೀತಿಯಲ್ಲಿ ಮುಂದುವರಿ ಯುವ ಆಶಾ ಭಾವನೆ ತುಂಬಿಕೊಂಡಿದೆ.

**ಜ್ಯೂನಿಯರ್ ಕ್ರಿಕೆಟರ್ ಪಂದ್ಯಾಟ :** ಪ್ರತಿ ವರ್ಷ 10ನೇ ತರಗತಿಯ ಒಳಗಿನ ಮಕ್ಕಳಿಗಾಗಿ ಕ್ರಿಕೆಟ್ ಪಂದ್ಯಾಟವನ್ನು ಅದೇ ದಿನ ಹಮ್ಮಿಕೊಳ್ಳಲಾಗುತ್ತಿತ್ತು. ಅದರಂತೆ ಈ ವರ್ಷವೂ ಆಗಮಿಸಿದ್ದ ಎರಡು ತಂಡಗಳ ನಡುವೆ ಜ್ಯೂನಿಯರ್ ಕ್ರಿಕೆಟರ್ಸ್ ಪಂದ್ಯಾಟ ನೆರವೇರಿತು. ಈ ಪಂದ್ಯದಲ್ಲಿ ರೋಹಿತ್ ಮತ್ತು ಬಳಗವನ್ನು ಸೋಲಿಸಿದ ರೋಹನ್ ಮತ್ತು ಬಳಗವು ವಿನ್ನರ್ ಆಗಿ ಮೂಡಿ ಬಂತು. ಹೀಗೆ ರೋಹಿತ್ ಮತ್ತು ಬಳಗ ರನ್ನರ್ಸ್ ಬಹುಮಾನವನ್ನೂ, ರೋಹನ್ ಮತ್ತು ಬಳಗವು ವಿನ್ನರ್ಸ್ ಬಹುಮಾನವನ್ನೂ ವೇದಿಕೆಯಲ್ಲಿದ್ದ ಅತಿಥಿಗಳಿಂದ ಸ್ವೀಕರಿಸಿದರು.

**ಕೃತಜ್ಞತಾರ್ಪಣೆ :** ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟಕ್ಕೆ ನಗದು ಬಹುಮಾನಗಳ ಕೊಡುಗೆ ನೀಡಿದ ಪ್ರಾಯೋಜಕರಿಗೆ, ಧನ ಸಹಾಯ ನೀಡಿದ ಸಮಾಜ ಬಂಧುಗಳಿಗೆ ಮತ್ತು ಸಂಸ್ಥೆಗಳಿಗೆ, ಬೇರೆ ಬೇರೆ ಊರುಗಳಿಂದ ಆಗಮಿಸಿದ ತಂಡ ಹಾಗೂ ಸಮಾಜ ಬಾಂಧವರಿಗೆ, ನಮ್ಮೊಂದಿಗೆ ದುಡಿದ ನಿರ್ಲಿಪ್ತ ಅಂಪೈರ್‌ಗಳಿಗೆ, ಪಂದ್ಯ ನಡೆಸಲು ಬಹಳಷ್ಟು ಶ್ರಮಿಸಿದ ಶ್ರೀ ಟಿ.ವಿಶ್ವನಾಥ್ ಶ್ಯಾನುಭಾಗ್, ಶ್ರೀ ಪ್ರತೀಕ್ ರಾವ್, ಅವಿರತ ದುಡಿದು ಪ್ರತಿಯೊಂದು ಕಾರ್ಯವನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿದ ಮೆನೇಜರ್‌ಗಳಾದ ಶ್ರೀ ಅಜಿತ್ ಕುಮಾರ್ ಹಾಗೂ ಶ್ರೀ ನಾಗಭೂಷಣ್, ಸಹಕರಿಸಿದ ಎಲ್ಲ ಸಮಾಜ ಬಾಂಧವರಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷ ಸಹಾಯ ಮಾಡಿದ ಎಲ್ಲರಿಗೂ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘ(ರಿ.) ಇದರ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಮಂಡಳಿಯು ಅನಂತ ಕೃತಜ್ಞತೆ ಸಲ್ಲಿಸುತ್ತದೆ.

ವರದಿ : **ಕೃಷ್ಣಕುಮಾರ್ ರಾವ್, ಮಟ್ಟು**

### ಶ್ರೀ ಶಾರದಾ ಟ್ರೋಫಿ ಬಹುಮಾನಗಳ ಪ್ರಾಯೋಜಕರು :

1. **ಶ್ರೀ ಅಲೆವೂರು ಶ್ಯಾಮರಾವ್ ದಂಪತಿಗಳು**
   **ತಮ್ಮ ಮಾತಾಪಿತೃಗಳಾದ ದಿ| ಭುಜಂಗ ರಾವ್ ಮತ್ತು ದಿ| ಶಾಂತಾ ಇವರ ಸ್ಮರಣಾರ್ಥ**
   (ವಿಜೇತ ತಂಡಕ್ಕೆ ನಗದು ಪುರಸ್ಕಾರ–ರೂ. 10000/–)
2. **ಶ್ರೀಮತಿ ಸುನಂದಾ ಸಿ.ಎಸ್.ರಾವ್, ಚಿಟ್ಪಾಡಿ**
   (ರನ್ನರ್ಸ್ ಅಪ್ ತಂಡಕ್ಕೆ ನಗದು ಪುರಸ್ಕಾರ–ರೂ.6000/–))
3. **ಶ್ರೀ ವೈ.ಭುವನೇಂದ್ರ ರಾವ್**
   **ತಮ್ಮ ಮಾತಾಪಿತೃಗಳಾದ ದಿ| ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜೋತಿಷ್ಕರು ಮತ್ತು ದಿ| ಗಿರಿಜಮ್ಮ ಇವರ ಸ್ಮರಣಾರ್ಥ**
   (ಸೆಮಿಫೈನಲ್ ಕಳಕೊಂಡ ತಂಡಗಳಿಗೆ ನಗದು ಪುರಸ್ಕಾರ–ರೂ.6000/–)
4. **ಶ್ರೀ ಬಿ.ಜಯರಾಮ ರಾವ್ ಉಡುಪಿ**
   (ಉತ್ತಮ ಬೌಲರ್, ಬ್ಯಾಟ್ಸ್‌ಮ್ಯಾನ್, ಆಲ್‌ರೌಂಡರ್‌ಗಳಿಗೆ ನಗದು ಪುರಸ್ಕಾರ–ರೂ.6000/–)
   (ತಲಾ ರೂ.2000/–ದಂತೆ)

### ಶ್ರೀ ಶಾರದಾ ಟ್ರೋಫಿ–2021 ಬಹುಮಾನಿತರ ವಿವರ

| | | | |
|---|---|---|---|
| 1. | ವಿಜೇತ ತಂಡ | : | ನಂದಳಿಕೆ–ಬಿ |
| 2. | ರನ್ನರ್ಸ್ ಅಪ್ ತಂಡ | : | ಜೆ.ಸಿ.ಟಿ ಬೆಂಗಳೂರು |
| 3. | ಸೆಮಿಫೈನಲ್ ಕಳಕೊಂಡ ತಂಡಗಳು | : | ಬಿ.ಎಸ್ ಕುಂದಾಪುರ<br>ಸ್ಥಾನಿಕ ರೋಯಲ್ಸ್ ಬೆಳ್ತಂಗಡಿ |
| 4. | ಉತ್ತಮ ಬೌಲರ್ | : | ಅಭಿಲಾಷ್ ಜೆ.ಸಿ.ಟಿ ಬೆಂಗಳೂರು ತಂಡ |
| | ಉತ್ತಮ ಬ್ಯಾಟ್ಸ್‌ಮ್ಯಾನ್ | : | ಕಾರ್ತಿಕ್ ಜೆ.ಸಿ.ಟಿ ಬೆಂಗಳೂರು |
| | ಉತ್ತಮ ಆಲ್‌ರೌಂಡರ್ | : | ವಿಕ್ರಮ್ ನಂದಳಿಕೆ–ಬಿ ತಂಡ |

5. ವಿನ್ನಿಂಗ್ ಶೋಟ್ ಸಿಕರ್ ಭಾರಿಸಿದ್ದಕ್ಕಾಗಿ– ನಂದಳಿಕೆ–ಬಿ ತಂಡದ ವಿಘ್ನೇಶ್
(ರೂ. 1000/– ಅಥಿತಿಗಳಾದ ಶ್ರೀ ರವೀಂದ್ರ ಭಂಡಿಯವರಿಂದ ಕೊಡುಗೆ)

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ. ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೋಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue
Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933



# ಶ್ರೀ ಶಾರದಾ ಮಂಟಪದಲ್ಲಿ ಮಹಿಳೆಯರ ಒಳಾಂಗಣ ಕ್ರೀಡಾಕೂಟ



ದಿನಾಂಕ 21–03–2021 ನೇ ಭಾನುವಾರದ ಪೂರ್ವಾಹ್ನದಂದು ಶ್ರೀ ಶಾರದಾ ಮಂಟಪದಲ್ಲಿ ಮಹಿಳಾವೇದಿಕೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ಮಹಿಳೆಯರಿಗೆ ಮತ್ತು ಮಕ್ಕಳಿಗಾಗಿ ವಿವಿಧ ಒಳಾಂಗಣ ಕ್ರೀಡಾಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಬೆಳಿಗ್ಗೆ ಬಿಸಿಬಿಸಿ ದೋಸೆ ಹಾಗೂ ಹಾಲುಬಾಯಿಯ ಉಪಹಾರವನ್ನು ಸವಿದ ನಂತರ ಮಂಟಪದ ಹಾಲಿನಲ್ಲಿ ಐದು ವರ್ಷದ ಒಳಗಿನ ಮಕ್ಕಳಿಗಾಗಿ ಚಾಕಲೇಟ್ ಹೆಕ್ಕುವುದು, ಬಲೂನನ್ನು ತಂದುಕೊಡುವುದು. ಒಂದರಿಂದ ನಾಲ್ಕನೇ ತರಗತಿಯ ವರೆಗಿನ ಮಕ್ಕಳಿಗೆ ನಾಣ್ಯವನ್ನು ಬೇರ್ಪಡಿಸುವುದು. ಚೆಂಡನ್ನು ಬಾಲ್ದಿಗೆ ಹಾಕುವುದು, ಐದರಿಂದ ಏಳನೇ ತರಗತಿಯ ಮಕ್ಕಳಿಗೆ ಕಣ್ಣಿಗೆ ಬಟ್ಟೆ ಕಟ್ಟಿ ನೇರವಾಗಿ ನಡೆಯುವುದು ಹಾಗೂ ಕಡ್ಲೆಬೇಳೆ ಮತ್ತು ತೊಗರಿಬೇಳೆಯ ಮಿಶ್ರಣವನ್ನು ಬೇರ್ಪಡಿಸುವುದು. ಎಂಟರಿಂದ ದ್ವಿತೀಯ ಪಿಯುಸಿಯ ಮಕ್ಕಳಿಗಾಗಿ ಥರ್ಮಾಕಾಲ್ ಬಾಲ್‌ಗಳನ್ನು ಸ್ಟ್ರಾದ ಸಹಾಯದಿಂದ ಹೆಕ್ಕುವುದು ಹಾಗೂ ಚಮಚದ ಮೇಲೆ ಬಿಸ್ಕತ್‌ಗಳನ್ನು ಜೋಡಿಸುವುದು. ಹೀಗೆ ವಿವಿಧ ಸ್ಪರ್ಧೆಗಳಲ್ಲಿ ಬಹಳ ಸಂಖ್ಯೆಯಲ್ಲಿ ಮಕ್ಕಳು ಪಾಲ್ಗೊಂಡರು. ಇನ್ನು ಮಹಿಳೆಯರಿಗಾಗಿ ಹಗ್ಗವನ್ನು ಸೊಂಟಕ್ಕೆ ಕಟ್ಟಿ ಸ್ಟ್ರಾವನ್ನು ಸಿಕ್ಕಿಸುವ ಸ್ಪರ್ಧೆಯಲ್ಲಿಯೂ ಕೂಡಾ ಮಹಿಳೆಯರು ನಾಮುಂದು, ತಾಮುಂದು ಎಂದು ಬಹಳ ಉತ್ಸಾಹದಿಂದ ಭಾಗವಹಿಸಿರುವುದು ಕಂಡು ಬಂದಿತು. ಈ ಎಲ್ಲ ಸ್ಪರ್ಧೆಗಳನ್ನು ಶ್ರೀಮತಿ ಮೀರಾ ರಾವ್ ಮತ್ತು ಪವಿತ್ರಾ ರಾವ್ ಇವರುಗಳು ಅಚ್ಚುಕಟ್ಟಾಗಿ ನಿರ್ವಹಿಸಿದರು. ಹಾಗೂ ಇವರೊಂದಿಗೆ ಇತರ ಮಹಿಳಾ ಸದಸ್ಯರುಗಳೂ ಸಹಕರಿಸಿದರು.

ಮಧ್ಯಾಹ್ನದ ಭೋಜನದ ಅನಂತರ ಬಹುಮಾನ ವಿತರಣಾ ಕಾರ್ಯಕ್ರಮವು ಜರುಗಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ವಿಜಯಾ ಉಮೇಶ್‌ರಾವ್ ಇವರು ಮಂಗಳೂರಿನಿಂದ ಆಗಮಿಸಿದ್ದರು. ಇವರ ಕಿರುಪರಿಚಯವನ್ನು ಶ್ರೀಮತಿ ಪವಿತ್ರಾರಾವ್ ಇವರು ಮಾಡಿದರು. ವೇದಿಕೆಯಲ್ಲಿ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಉಪಾಧ್ಯಕ್ಷರಾದ ಶ್ರೀ ವೈ.ಎಸ್.ರಾವ್, ಕಾರ್ಯದರ್ಶಿಗಳಾದ ಶ್ರೀ ಪ್ರಭಾಕರಭಂಡಿ ಕೋಶಾಧಿಕಾರಿ, ಶ್ರೀ ಜಯರಾವ್ ರಾವ್ ಹಾಗೂ ಮಹಿಳಾ ವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ಪೂರ್ಣಿಮಾ ಪ್ರಫುಲ್ಲಚಂದ್ರ ಇವರುಗಳು ಉಪಸ್ಥಿತರಿದ್ದರು. ವಿಜೇತರಾದ ಎಲ್ಲ ಮಕ್ಕಳು ಹಾಗೂ ಮಹಿಳೆಯರಿಗೆ ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಬಹುಮಾನವನ್ನು ವಿತರಿಸಿದರು. ಶ್ರೀಮತಿ ವಿಜಯಾರಾವ್ ಅವರು ನಮ್ಮ ದೈನಂದಿನ ಜೀವನದಲ್ಲಿ ಯೋಗ ಹಾಗೂ ದೈಹಿಕ ವ್ಯಾಯಾಮಗಳ ಮಹತ್ವವನ್ನು ಮನವರಿಕೆ ಮಾಡಿದರು. ಮಹಿಳಾವೇದಿಕೆಯಿಂದ ಶ್ರೀಮತಿ ವಿಜಯಾ ರಾವ್‌ರವರನ್ನು ಸ್ಮರಣಿಕೆಯೊಂದಿಗೆ ಗೌರವಿಸಲಾಯಿತು. ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀಮತಿ ರಜನಿ ಹೆಬ್ಬಾರ್‌ರವರು ನಡೆಸಿಕೊಟ್ಟರು. ಸ್ವಾಗತ ಭಾಷಣವನ್ನು ಶ್ರೀಮತಿ ಸಂಗೀತಾ ರಾವ್ ಮಾಡಿದರು. ಬಹುಮಾನಿತರ ಪಟ್ಟಿಯನ್ನು ಶ್ರೀಮತಿ ಪಾವನಾ ರಾವ್‌ರವರು ವಾಚಿಸಿದರು. ಕೊನೆಯದಾಗಿ ಧನ್ಯವಾದ ಸಮರ್ಪಣೆಯನ್ನು ಶ್ರೀಮತಿ ಜ್ಯೋತಿ ಸಂತೋಷ್ ರಾವ್ ನಡೆಸಿಕೊಟ್ಟರು. ಒಳಾಂಗಣ ಸ್ಪರ್ಧೆಗಳಿಗೆ ಬೇಕಾದ ಪರಿಕರಗಳನ್ನು ಎಮ್.ಸಂತೋಷ್ ರಾವ್ ಚಿಟ್ಪಾಡಿ ಇವರು ಒದಗಿಸಿದರು. ಒಟ್ಟಿನಲ್ಲಿ ಊಹೆಗೂ ಮೀರಿದ ಸಂಖ್ಯೆಯಲ್ಲಿ ಸ್ಪರ್ಧಾಳುಗಳು ಕ್ರೀಡೆಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

– ಶ್ರೀಮತಿ ಸಂಗೀತಾ ಸುಭಾಶ್ಚಂದ್ರ

# ದಿ। ಚಿಟ್ಪಾಡಿ ಭುಜಂಗರಾಯರ ಭಾವಚಿತ್ರ ಅನಾವರಣ



ದಿನಾಂಕ 27–03–2021ರ ಶನಿವಾರ ಉಡುಪಿ ಚಿಟ್ಪಾಡಿ ದಿ। ಭುಜಂಗರಾಯರ ವರ್ಷಾಂತಿಕ ಪುಣ್ಯತಿಥಿಯು ಚಿಟ್ಪಾಡಿಯ ಅವರ ಸ್ವಗೃಹದಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ನಡೆದ ಸರಳ ಸಮಾರಂಭದಲ್ಲಿ ದಿ। ಭುಜಂಗರಾಯರ ಭಾವಚಿತ್ರವನ್ನು ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಇದರ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್ ಅನಾವರಣಗೊಳಿಸಿದರು. ಅಲ್ಲದೆ ಅಲ್ಲಿ ಉಪಸ್ಥಿತರಿದ್ದ ದಿವಂಗತರ ನಿಕಟ ಬಂಧು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ದಿವಂಗತ ಭುಜಂಗರಾವ್ ಹಾಗೂ ಅವರ ಧರ್ಮಪತ್ನಿ ದಿವಂಗತ ಸುಂದರಿ ಬಿ.ರಾವ್ ದಂಪತಿಗಳ ಹಿಂದಿನ ಕಷ್ಟದ ದಿನಗಳನ್ನು ನೆನಪಿಸುತ್ತಾ "ಅವರ ಮಕ್ಕಳಿಗೆ ಒಳ್ಳೆಯ ಸಂಸ್ಕಾರ, ವಿದ್ಯೆ ನೀಡಿದ ಫಲವಾಗಿ ಅವರ ಮಕ್ಕಳು ಇಂದು ಒಳ್ಳೆಯ ಸ್ಥಿತಿಗೆ ತಲುಪಿದ್ದಾರೆ. ಮಕ್ಕಳು ಕೂಡಾ ಇದನ್ನು ನೆನಪಿನಲ್ಲಿಟ್ಟುಕೊಂಡು ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ವಿದ್ಯಾರ್ಥಿಗಳಿಗೆ ನೆರವು ನೀಡುವ ವಿಶಾಲ ಮನಸ್ಸು ಹೊಂದಿದ್ದಾರೆ" ಎಂದರು. ದಿವಂಗತರ ಮಕ್ಕಳಾದ ಶ್ರೀ ಬಾಲಚಂದ್ರ ರಾವ್, ಶ್ರೀ ಅರುಣ ರಾವ್, ಶ್ರೀ ನಾರಾಯಣ ರಾವ್, ಶ್ರೀ ರಾಜೇಶ್ ರಾವ್, ಶ್ರೀಮತಿ ಗೀತಾ ಕೆ.ರಾವ್, ಶ್ರೀಮತಿ ಭಾರತಿ ಸಿ.ರಾವ್ ಜೊತೆಯಾಗಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್‌ರಿಗೆ ಭಾವಚಿತ್ರದೊಂದಿಗೆ ನಗದು ಮೊಬಲಗನ್ನು ಹಸ್ತಾಂತರಿಸಿದರು. ಸಂಘದ ಕೋಶಾಧಿಕಾರಿ ಶ್ರೀ ಜಯರಾಮ ರಾವ್ ಹಾಗೂ ದಿವಂಗತರ ಬಂಧುಗಳು ಉಪಸ್ಥಿತರಿದ್ದರು. ಸಂಘಕ್ಕೆ ನೀಡಿದ ದೇಣಿಗೆಗಾಗಿ ಶ್ರೀ ಮಂಜುನಾಥ ಹೆಬ್ಬಾರ್ ಕೃತಜ್ಞತೆ ಸಲ್ಲಿಸಿದರು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮ ನಿರೂಪಣೆ ಮಾಡಿದರು.


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ “ಗೃಹ ಸಾಲ” ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011–12ರಿಂದ 2016–17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

–: ಶುಭಾಶಯಗಳು :–

“ಶ್ರೀ ಶಾರದಾಂಬೆಗೆ ವಂದಿಸುತ್ತಾ “ಶ್ರೀ ಶಾರದಾ” ಪತ್ರಿಕೆಯು ನವರಸಭರಿತಳಾಗಿ ಸಮಾಜಕ್ಕೆ ದಾರಿದೀಪವಾಗಲಿ” ಎಂದು ಹಾರೈಸುವ

ಜಿ.ಕೆ.ಕೋಲ್ಪೆ, ಉಡುಪಿ

ಮಹಾಪೋಷಕರು, ಶ್ರೀಶಾರದಾ ಪತ್ರಿಕೆ ಹಾಗೂ ಮಾಜಿ ಉಪಾಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣಮಹಾಮಂಡಲ



ತಂತ್ರಾಡಿ ವಿಶ್ವನಾಥ ಶಾನುಭೋಗ್

☎ 94487 24161, 97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ

ಹೋಟೇಲ್ ವೃಂದಾವನ, ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್, ಪಡುಬಿದ್ರಿ | ವಿಷ್ಣು ಟ್ರಾನ್ಸ್‌ಪೋರ್ಟ್, ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ




ಪ್ರತಿಷ್ಠಾ ಮಹೋತ್ಸವ-ಧಾರ್ಮಿಕ ಕಾರ್ಯಕ್ರಮ


ವೈದಿಕರಿಂದ ಪ್ರತಿಷ್ಠಾ ಮಹೋತ್ಸವದ ಧಾರ್ಮಿಕ ವಿಧಿಗಳು


ಕುಮಾರಿ ಪ್ರಣಮ್ಯ ಭಂಡಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ


ಡಾ। ಚೈತ್ರ ಇವರಿಗೆ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರ


ಕುಮಾರಿ ಪ್ರಜ್ಞಾ ಹೆಬ್ಬಾರ್ ಇವರಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ


ಡಾ। ದೀಪ್ತಿ ಬಿ.ರಾವ್ ಇವರಿಗೆ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರ


ಒಳಾಂಗಣ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿದ ಮಹಿಳಾ ವಿಭಾಗದ ಸದಸ್ಯೆಯರು


ಶ್ರೀಶಾರದಾ ಟ್ರೋಫಿ-2021ಕ್ಕೆ ಆಗಮಿಸಿದ ಕ್ರಿಕೆಟ್ ಆಟಗಾರರಿಗೆ ಉಪಹಾರ ವ್ಯವಸ್ಥೆ


ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟದ ಉದ್ಘಾಟನೆ ಶ್ರೀ ರವೀಂದ್ರ ಭಂಡಿ ಪೆರ್ಡೂರು ಇವರಿಂದ


ಶ್ರೀಶಾರದಾ ಟ್ರೋಫಿ-2021ರ ವಿನ್ನರ್ಸ್ ಹಾಗೂ ರನ್ನರ್ಸ್ ತಂಡದ ಸದಸ್ಯರು ಸಂಘಟರೊಂದಿಗೆ


ಶ್ರೀ ಶಾಂಕರತತ್ವ ಪ್ರಸಾರ ಅಭಿಯಾನ, ಉಡುಪಿ ಜಿಲ್ಲೆ ಹಾಗೂ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ ಇವರಿಂದ ಶ್ರೀ ಶ್ರೀ ಜಗದ್ಗುರು ಭಾರತೀತೀರ್ಥ ಮಹಾಸನ್ನಿಧಾನಂಗಳವರ ಸಪ್ತತಿಪೂರ್ತಿ ಕಾರ್ಯಕ್ರಮಕ್ಕೆ ಹೊರೆಕಾಣಿಕೆ ಸಮರ್ಪಿಸಲಾಯಿತು.




Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org